ಕರ್ನಾಟಕ ಸರ್ಕಾರ

# ಬಾಲ ಭವನ ಸೊಸೈಟಿ,

# ಕಬ್ಬನ್ ಪಾರ್ಕ್, ಬೆಂಗಳೂರು

( ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ )

# *ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 4[1] [ಎ] ಮತ್ತು 4[1]ಬಿ ಪ್ರಕಾರ ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಿರುವ ಕೈಪಿಡಿ*

---

**ಕಬ್ಬನ್ ಪಾರ್ಕ್, ಬೆಂಗಳೂರು:560 001 ದೂ. ಸಂ. 080 22864189 / 22861423**

Website – www. Jawaharbalbhavan.com (Information Desk)

E-Mail - secybalbhavan.bng@gmail.com

P£Áð I P ¸PÁðg

**ಬಾಲಭವನ ಸೊಸೈಟಿ** ☎ /📠: 080 – 22864189

(ಮಹಿಳಾ ಮತ್ತು ಮಕ್ಕಳ ಸಚಿವಾಲಯದಡಿಯಲ್ಲಿ) ☎ : 080 - 22861423

ಕಬ್ಬನ್ ಪಾರ್ಕ್, ಬೆಂಗಳೂರು – 560 001

---

**ಸಂಖ್ಯೆ: ಬಾಭಸೊ/ಎವಿಎಸ್–2/ಮಾಹಿತಿ ಹಕ್ಕು/2004–05/848–849** **ದಿನಾಂಕ: 25–07–2004**

## <u>ಅಧಿಸೂಚನೆ</u>

ಬಾಲ ಭವನ ಸೊಸೈಟಿ
ಕಬ್ಬನ್ ಪಾರ್ಕ್,
ಬೆಂಗಳೂರು–560 001 – **ಸಾರ್ವಜನಿಕ ಪ್ರಾಧಿಕಾರ**

ಆಡಳಿತಾಧಿಕಾರಿಗಳು
ಬಾಲ ಭವನ,
ಬೆಂಗಳೂರು–560 001 – **ಸಕ್ಷಮ ಪ್ರಾಧಿಕಾರ**

ಕಾರ್ಯದರ್ಶಿಗಳು,
ಬಾಲ ಭವನ ಸೊಸೈಟಿ,
ಕಬ್ಬನ್ ಪಾರ್ಕ್,
ಬೆಂಗಳೂರು–560 001 – **ಅಪೀಲು ಪ್ರಾಧಿಕಾರ**

ಸಹಿ/–
**ಕಾರ್ಯದರ್ಶಿಗಳು,**
**ಬಾಲ ಭವನ ಸೊಸೈಟಿ,**
**ಬೆಂಗಳೂರು.**

<u>ಪ್ರತಿಯನ್ನು:</u>

1. **ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು**
2. **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ [ಸಾರ್ವಜನಿಕ ದೂರು ನಿವಾರಣೆ ]**
3. **ಪ್ರಕಟಣಾ ಫಲಕಕ್ಕೆ**
4. **ಮಾನ್ಯ ಅಧ್ಯಕ್ಷರು, ಬಾಲಭವನ ಸೊಸೈಟಿ, ಬೆಂಗಳೂರು.**

ಅರ್ಜಿ ನಂ. 14

<u>ಎಸ್ ನಂ. 174/85-86</u>
ಬೆಂಗಳೂರು ಸಿಟಿ ಕಾರ್ಪೋರೇಷನ್

## ನೋಂದಣಿ ಪ್ರಮಾಣ ಪತ್ರ

**ಜವಾಹರ ಬಾಲ ಭವನ, ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿ ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಕಾಯ್ದೆ 1960 [ಕರ್ನಾಟಕ ಕಾಯ್ದೆ ನಂ. 1960ರ ನಿಯಮ-17] ರಂತೆ " ದಿ ಬಾಲ ಭವನ ಸೊಸೈಟಿ " ಎಂಬ ಸಂಸ್ಥೆಯನ್ನು ರೂ. 50-00 ಶುಲ್ಕ ಸಂದಾಯ ಮಾಡಿಕೊಂಡು, ಬೆಂಗಳೂರಿನಲ್ಲಿ ದಿನಾಂಕ: 9ನೇ ಸೆಪ್ಟಂಬರ್ ಒಂದು ಸಾವಿರದ ಒಂಬೈನೂರ ಎಂಭತ್ತೈದನೇ ಇಸವಿ ದಿನಾಂಕದಂದು ನನ್ನ ಸಮ್ಮುಖದಲ್ಲಿ ನೋಂದಣಿ ಮಾಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.**

**ಸಹಿ/-**
[ ಎನ್.ಜಿ.ಹಾವನೂರ್ ]
ರಿಜಿಸ್ಟ್ರಾರ್ ಆಫ್ ಸೊಸೈಟಿ ಇನ್ ಕರ್ನಾಟಕ **ಪರವಾಗಿ**

ಕಛೇರಿ
ಮೊಹರು

# ದಿ ಬಾಲ ಭವನ ಸೊಸೈಟಿ, ಬೆಂಗಳೂರು

## ಸಂಘದ ನಿವೇದನ ಪತ್ರಿಕೆ

1. ಹೆಸರು : ಸಂಘದ ಹೆಸರು " ದಿ ಬಾಲ ಭವನ ಸೊಸೈಟಿ " ಎಂದು ಕರೆಯತಕ್ಕದ್ದು.

2. ವಿಳಾಸ : ಸಂಘದ ಅಧಿಕೃತ ನೋಂದಣಿ ವಿಳಾಸವು ಜವಾಹರ ಬಾಲ ಭವನ, ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿ ಇರತಕ್ಕದ್ದು.

3. ವ್ಯಾಪ್ತಿ : ಸಂಘದ ವ್ಯಾಪ್ತಿಯು ಕರ್ನಾಟಕ ರಾಜ್ಯದಾದ್ಯಂತ ವಿಸ್ತರಿಸಲ್ಪಟ್ಟಿರುತ್ತದ್ದೆ.

4. ಉದ್ದೇಶ/ಗುರಿ : [ಅ] ಬಾಲ ಭವನದ ಮೂಲಕ ರಾಜ್ಯದಲ್ಲಿಮನರಂಜನಾ ಚಟುವಟಿಕೆಗಳು ಮತ್ತು ಶಾಲಾ ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಂಡು ಮಕ್ಕಳ ಸರ್ವತೋಮುಖ ಕಲ್ಯಾಣಕ್ಕೆ ಪ್ರೋತ್ಸಾಹಿಸುವುದು
   [ಆ] ಮಕ್ಕಳ ಮನರಂಜನೆ ವಿಕಸನಕ್ಕಾಗಿ, ಮಕ್ಕಳ ಉದ್ಯಾನವನ, ಮಕ್ಕಳ ರಂಗಮಂದಿರಗಳು,ಮತ್ತಿತರಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು.
   [ಇ] ಚಿತ್ರಕಲೆ, ಕಲೆ, ಕೌಶಲ್ಯಕಲೆ ಮತ್ತು ಹವ್ಯಾಸ ಮತ್ತಿತರ ಪ್ರಾಕಾರಗಳಲ್ಲಿ ಮಕ್ಕಳಲ್ಲಿ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
   [ಈ] ಮಕ್ಕಳ ಮನರಂಜನೆಗೆ ಸಂಬಂಧಿಸಿದ ವಿಷಯಗಳಲ್ಲಿ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳಿಗೆ ಸಲಹೆ ನೀಡುವುದು.
   [ಉ] ಮಕ್ಕಳ ವಿಕಸನಕ್ಕೆ ಯಾವುದೇ ಇನ್ನಿತರ ಚಟುವಟಿಕೆಗಳನ್ನು ರಚಿಸಿ ಮಕ್ಕಳ ಅಭಿವೃದ್ಧಿಗೆ ಪ್ರೋತ್ಸಾಹಿಸಿ ಹಮ್ಮಿಕೊಳ್ಳುವುದು.

5. ಆದಾಯದ ಮೂಲಗಳು [ನಿಧಿ] : [ಅ] ಮೇಲಿನ ಗುರಿಗಳನ್ನು ಸಾಧಿಸಲು ಸಂಘವು, ಸರ್ಕಾರದ ಅನುದಾನ, ರಿಯಾಯಿತಿ ಸಾಲವನ್ನು ಕರ್ನಾಟಕ ಸರ್ಕಾರದಿಂದ ಸ್ವೀಕರಿಸುವುದು ಮತ್ತು ಕೇಂದ್ರಸರ್ಕಾರ ಮತ್ತುಅಂತರರಾಷ್ಟ್ರೀಯ ಪಾರುಪತ್ಯದಾರರಿಂದ ಮತ್ತು ಸ್ವಯಂ ಸೇವಾ ಸಂಸ್ಥೆಗಳ/ವ್ಯಕ್ತಿಗಳ ಮೂಲಕ ದೇಣಿಗೆ/ದಾನ, ಸಹಾಯಧನ ರೂಪದಲ್ಲಿ ಸ್ವೀಕರಿಸುವುದು.
   [ಆ] ದಿ ಸೊಸೈಟಿಯು ಚರ-ಸ್ಥಿರಾಸ್ತಿಗಳನ್ನು ಖರೀದಿ, ಬಾಡಿಗೆ, ಗುತ್ತಿಗೆ, ಕರಾರು ಮೂಲಕ ಪಡೆಯಲು ಮತ್ತು ಹೊಂದಲು ಅಥವಾ ಅಭಿವೃದ್ಧಿಪಡಿಸಲು, ಉನ್ನತೀಕರಿಸಲು ಅಥವಾ ವಿಲೇಗೆ ಅವಕಾಶವಿರುತ್ತದೆ.

6. ಸೊಸೈಟಿಯು ಯಾವುದೇ ರೂಪದಲ್ಲಿ ಗಳಿಸಿದ ಆದಾಯವನ್ನು ಸೊಸೈಟಿಯ ಮುಖ್ಯ ಉದ್ದೇಶಕ್ಕೆ ವಿನಿಯೋಗಿಸಬೇಕಾಗಿದೆಯೆ ಪರಂತು ಸೊಸೈಟಿಯ ಸದಸ್ಯರು ಅಥವಾ ಇತರರು ಹಂಚಿಕೊಳ್ಳುವಂತಿಲ್ಲ.
7. ಪ್ರಸ್ತುತ ಒಪ್ಪಿತ ಹಾಕಿದವರು ಸೊಸೈಟಿಯ ಪ್ರವರ್ಧಮಾನಕರಾಗಿದ್ದು, ವ್ಯವಸ್ಥಾಪಕ ಸಮಿತಿಯ ಕಾರ್ಯಕಾರಿ ಸಮಿತಿ ಸದಸ್ಯರ ವಿವರವನ್ನು ಮತ್ತು ನೋಂದಣಾಧಿಕಾರಿಯವರೊಡನೆ ವ್ಯವಹರಿಸಲು ನಿಯಮಿಸುವ ಅಧಿಕೃತ ವ್ಯಕ್ತಿಯ ವಿವರವನ್ನು ನೋಂದಣಿ ನಂತರ ಮಾಹಿತಿ ಒದಗಿಸಲಾಗುವುದು.

# ದಿ ಬಾಲ ಭವನ ಸೊಸೈಟಿ, ಬೆಂಗಳೂರು

## ನಿಯಮಾವಳಿ ಹಾಗೂ ನಿಬಂಧನೆಗಳು

1. ಈ ನಿಯಮಾವಳಿ ಮತ್ತು ನಿಬಂಧನೆಗಳು ಸಂಸ್ಥೆಯ ನಿವೇದನಾ ಪತ್ರಿಕೆಯಲ್ಲಿ ನಮೂದಿಸಿ ಸೇರಿಸಿದ ಗುರಿಗಳನ್ನು ಈಡೇರಿಸುವುದಕ್ಕೆ ರಚಿಸಲ್ಪಟ್ಟಿದ್ದು, ಇನ್ನು ಮುಂದೆ ಇವೆಲ್ಲವೂ " ದಿ ಬಾಲ ಭವನ ಸೊಸೈಟಿ, ಬೆಂಗಳೂರು " ಎಂದು ಕರೆಯಲ್ಪಡುತ್ತದೆ.

2. ವಿವರಣೆ: ಈ ನಿಯಮಾವಳಿಗಳು ಅರ್ಥಾನ್ವಯವಾಗುವುದಿದ್ದಲ್ಲಿ . . . . .

   [ಅ] " ದಿ ಸೊಸೈಟಿ " ಎಂದಲ್ಲಿ "ದಿ ಬಾಲ ಭವನ ಸೊಸೈಟಿ, ಬೆಂಗಳೂರು" ಎಂದು ಅರ್ಥೈಸುವುದು.
   [ಅ] " ನಿಯಮ " ಎಂದಲ್ಲಿ " ದಿ ಬಾಲ ಭವನ ಸೊಸೈಟಿ, ಬೆಂಗಳೂರು " ಸಂಘದ ನಿಯಮಾವಳಿ ಮತ್ತು ನಿಬಂಧನೆಗಳು.
   [ಇ] " ವ್ಯವಸ್ಥಾಪಕ ಸಮಿತಿ " ಎಂದಲ್ಲಿ ಸಂಘವು ನಿಕ್ಷೇಪಿಸುವ " ಆಡಳಿತ ಸಮಿತಿ " ಎಂದಾಗಿರುತ್ತದೆ.
   [ಈ] " ಸದಸ್ಯರು " ಎಂದರೆ ಸರ್ಕಾರದಿಂದ ನಾಮನಿರ್ದೇಶಿತಗೊಂಡ ಮತ್ತು ಸರ್ಕಾರವು ಸ್ಪಷ್ಟೀಕರಿಸಿದ ಸದಸ್ಯತ್ವ ಅವಧಿ ಒಳಗೊಂಡಿರುತ್ತದೆ.
   [ಉ] " ವ್ಯವಸ್ಥಾಪಕ ಸಮಿತಿ ಸದಸ್ಯರು " ಎಂದರೆ ಯಾವುದೇ ಸದಸ್ಯರು ಕರ್ನಾಟಕ ಸರ್ಕಾರದಿಂದ ನಾಮನಿರ್ದೇಶಿತಗೊಂಡವರು.
   [ಊ] " ವರ್ಷ " ಎಂದರೆ ವರ್ಷದ 1ನೇ ಏಪ್ರಿಲ್ ಪ್ರಾರಂಭವು ಮತ್ತು 31ನೇ ಮಾರ್ಚ್ ಅಂತ್ಯಗೊಳ್ಳುವುದು.

3. " ದಿ ಸೊಸೈಟಿ " ಯು ಸಲಹಾ ಕಮ್ ಕಾರ್ಯನಿರ್ವಾಹಕ ಸಮಿತಿಯಾಗಿರುತ್ತದೆ.

4. <u>ರಚನೆ</u> : " ದಿ ಸೊಸೈಟಿ " ಯು ಸರ್ಕಾರದಿಂದ ನಾಮನಿರ್ದೇಶಿಸಿದ ಅಧಿಕಾರಿ ಮತ್ತು ಅಧಿಕಾರೇತರ ಸದಸ್ಯರನ್ನು ಒಳಗೊಂಡಿರುತ್ತದೆ.

5. <u>ಸದಸ್ಯತ್ವ</u> :

   [ಅ] ಅರ್ಹತೆ: ಕರ್ನಾಟಕ ಸರ್ಕಾರದಿಂದ ನಾಮನಿರ್ದೇಶಿತಗೊಂಡ ಯಾವುದೇ ವ್ಯಕ್ತಿ, ಅಧಿಕಾರಿ ಅಥವಾ ಅಧಿಕಾರೇತರ ಸದಸ್ಯರು.
   [ಆ] ಸರ್ಕಾರದಿಂದ ನಾಮನಿರ್ದೇಶಿತಗೊಂಡ ಸದಸ್ಯರಿಗೆ ಸದಸ್ಯತ್ವ ಶುಲ್ಕವಾಗಲೀ ಮತ್ತು ಚಂದಾ/ವಂತಿಗೆ ನಿಗಧಿಸಿರುವುದಿಲ್ಲ.

6. <u>ವ್ಯವಧಾನ/ನಿಲ್ಲುವಿಕೆ:</u>

ಸದಸ್ಯರು ತಮ್ಮ ರಾಜೀನಾಮೆಯನ್ನು ಸಮಾಜ ಕಲ್ಯಾಣ ಇಲಾಖೆ [ಪ್ರಸ್ತುತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ]ಕ್ಕೆ ನೀಡಿದ ನಂತರ ಸರ್ಕಾರವು ರಾಜೀನಾಮೆ ಅಂಗೀಕರಿಸಿದ ಕೂಡಲೇ ಸದಸ್ಯರ ಹಕ್ಕುಬಾಧ್ಯತೆಗಳು ಹಾಗೂ ಸವಲತ್ತುಗಳು ಮುಕ್ತಾಯಗೊಳ್ಳುತ್ತವೆ.

7. ಸಾಮಾನ್ಯ ಸಮಿತಿ ರಚಿಸುವಲ್ಲಿ ಎಲ್ಲಾ ಸದಸ್ಯರು ಮತ ಚಲಾಯಿಸಲು ಅರ್ಹರಿರುತ್ತಾರೆ. ಪ್ರತಿ ವರ್ಷ ವಾರ್ಷಿಕ ಸಾಮಾನ್ಯ ಸಭೆ ಇದ್ದು, ಮತ್ತು ನಿಗಧಿತ ಪ್ರತಿ ಆರ್ಥಿಕ ವರ್ಷದ ಅಂತ್ಯದ ನಂತರ ಮುಂದಿನ ಆರ್ಥಿಕ ವರ್ಷದ ಅಂತ್ಯಕ್ಕೆ ಆರು ತಿಂಗಳು ಮುಂಚಿತವಾಗಿ ಸರ್ವ ಸದಸ್ಯರ ಸಾಮಾನ್ಯ ಸಭೆ ಕರೆಯಬೇಕಾಗಿರುತ್ತದೆ. ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್-1960ರ ನಿಯಮ 112[3]ರಂತೆ ಸೊಸೈಟಿಯ ವ್ಯವಹಾರಗಳ ಅಗತ್ಯತೆಗೆ ಅನುಗುಣವಾಗಿ ಯಾವುದೇ ಸಮಯದಲ್ಲಿಯೂ ವಿಶೇಷ ಸಾಮಾನ್ಯ ಸಭೆಯನ್ನು ಕರೆಯ ಬಹುದಾಗಿರುತ್ತದೆ.

8. <u>ನೋಟೀಸ್</u> : ಎಲ್ಲಾ ಸದಸ್ಯರಿಗೆ ಸಾಮಾನ್ಯ ಸಭೆಗೆ ಆಹ್ವಾನಿಸಲು ಕನಿಷ್ಠ 10 ದಿನಗಳ ಕಾಲಾವಕಾಶದಲ್ಲಿ ತಿಳುವಳಿಕೆ ಪತ್ರವು ಸಭೆಯ ದಿನಾಂಕ, ಸಮಯ, ಸಭೆಯ ಸ್ಥಳ ಮತ್ತು ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳ ಕಾರ್ಯಸೂಚಿಗಳನ್ನು ಒಳಗೊಂಡಿರತಕ್ಕದ್ದು. ತಿಳವಳಿಕೆ ಪತ್ರವನ್ನು ಯಾವುದೇ ಸ್ವೀಕರಿಸಲಾಗಲಿಲ್ಲವೆಂಬ ಕಾರಣಕ್ಕೆ ಸಾಮಾನ್ಯ ಸಭೆ ನಡವಳಿ ಅಸಿಂಧುವಾಗುವುದಿಲ್ಲ.

9. <u>ಕನಿಷ್ಠ ಮಿತಿ</u> : ಒಟ್ಟು ಸದಸ್ಯರ 1/3 ಭಾಗದ ಸದಸ್ಯರು

<u>10. ಸಾಮಾನ್ಯ ಸಭೆ</u>

ಸಾಮಾನ್ಯ ಸಭೆ ನಡವಳಿಗಳನ್ನು ವಹಿಯಲ್ಲಿ ದಾಖಲಿಸಿ ದಾಖಲಿಸಿ ಕಾರ್ಯದರ್ಶಿಗಳು ಮತ್ತು ಸಭಾ ಅಧ್ಯಕ್ಷರ ಸಹಿಯಾಗಿರತಕ್ಕದ್ದು.

11, <u>ವ್ಯವಸ್ಥಾಪಕ ಸಮಿತಿ :</u>

ವ್ಯವಸ್ಥಾಪಕ ಸಮಿತಿಯು ಏಳು ಸದಸ್ಯರನ್ನು ಹೊಂದಿರಬೇಕಾಗಿದ್ದು, ಹೀಗೆ___

[1] ಅಧ್ಯಕ್ಷರು
[2] ಉಪಾಧ್ಯಕ್ಷರು
[3] ಕಾರ್ಯದರ್ಶಿಗಳು
[4] ಸದಸ್ಯರು
[5] ಸದಸ್ಯರು
[6] ಸದಸ್ಯರು
[7] ಸದಸ್ಯರು

ಕರ್ನಾಟಕ ಸರ್ಕಾರದಿಂದ ನಾಮನಿರ್ದೇಶಿತಗೊಂಡ ವ್ಯಕ್ತಿಗಳಾಗಿರತಕ್ಕದ್ದು. ವ್ಯವಸ್ಥಾಪಕ ಸಮಿತಿ ಸಭೆಯ ಅವಧಿಯು ಮೂರು ವರ್ಷಗಳನ್ನು ಹೊಂದಿದ್ದು ಅಥವಾ ಕರ್ನಾಟಕ ಸಕಾರವು ನಿಗಧಿಸುವ ಅವಧಿಗೆ ಸೀಮಿತವಾಗಿರುತ್ತದೆ.

12. ಕರ್ನಾಟಕ ಸರ್ಕಾರವು ನಿಗಧಿಸುವ ಪೀಠ ಶುಲ್ಕವನ್ನು ಸಭೆಗೆ ಹಾಜರಾಗುವ ವ್ಯವಸ್ಥಾಪಕ ಸಮಿತಿ ಸದಸ್ಯರಿಗೆ ಸಂದಾಯ ಮಾಡತಕ್ಕದ್ದು.

13. <u>ವ್ಯವಸ್ಥಾಪಕ ಸಮಿತಿ ಸಭೆಯ ಅಧಿಕಾರಗಳು</u>:

[ಅ] ಸೊಸೈಟಿಯ ದಿನನಿತ್ಯದ ಆಡಳಿತ, ವಿಸ್ತೃತವಾದ ರಚನಾ ಕ್ರಮ ಹಾಗೂ ಕಾರ್ಯಕ್ರಮಗಳನ್ನು ರಚಿಸಿ ನಿರ್ವಹಿಸುವುದು.
[ಆ] ಸೊಸೈಟಿಯ ಆಸ್ತಿಪಾಸ್ತಿಗಳ ನಿಗಾ ವಹಿಸುವುದು ಮತ್ತು ಸೊಸೈಟಿಗೆ ಅಗತ್ಯವಿರುವ ವೆಚ್ಚ ಭರಿಸುವುದು.
[ಇ] ಯೋಜನೆಗಳಿಗೆ ಸಂಬಂಧಿಸಿದ ಅನುದಾನ ಮತ್ತು ಸಹಾಯಧನ ಇವುಗಳನ್ನು ಸ್ವೀಕರಿಸಿ ಸುಫರ್ಧಿನಲ್ಲಿಡುವುದು.
[ಈ] ಪ್ರತಿ ವರ್ಷ ಸೊಸೈಟಿಯ ಆಯವ್ಯಯ/ಮುಂಗಡ ಪತ್ರಿಕೆ ಸಿದ್ಧಪಡಿಸುವುದು. ಮತ್ತು ಆಯವ್ಯಯದ ಮಿತಿಯೊಳಗೆ ವೆಚ್ಚವನ್ನು ಭರಿಸಲು ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆಯುವುದು.
[ಉ] ಇನ್ನಿತರ ಸಭೆ-ಸಮಾರಂಭಗಳನ್ನು ಹಮ್ಮಿಕೊಳ್ಳುವುದು ಮತ್ತು ಕರ್ನಾಟಕ ಸರ್ಕಾರವು ಆಗ್ಗಿಂದಾಗ್ಗೆ ವಹಿಸುವ ಸಮಾರಂಭಗಳನ್ನು ನಡೆಸುವುದು.
[ಊ] ವೆಚ್ಚಗಳನ್ನು ಪಾವತಿಸುವುದು, ಸೊಸೈಟಿಯ ಅಂಗರಚನೆ ಮತ್ತು ರಾಜೀನಾಮೆಗೆ ಮತ್ತು ಇದರ ಆಡಳಿತ ವೆಚ್ಚವನ್ನು ನಿಧಿಯಿಂದ ಇತ್ಯರ್ಥಪಡಿಸುವುದು.

[ಋ] ಸೊಸೈಟಿಯ ಖರ್ಚು ವೆಚ್ಚಗಳನ್ನು ನಿಧಿಯ ಮೂಲಕ ಭರಿಸುವುದು, ಸಾಧನ ಸಲಕರಣೆಗಳನ್ನು ಖರೀದಿಸಲು, ವೇತನ ಪಾವತಿಸಲು, ಮತ್ತು ಅದೇ ರೀತಿಯ ಮತ್ತಿತರ ವೆಚ್ಚಗಳನ್ನು ಬಾಲ ಭವನ ನಿರ್ವಹಣೆಯ ಅಗತ್ಯತೆಗೆ ಅನುಸಾರವಾಗಿ ಭರಿಸುವುದು.

[ೠ] ಕಟ್ಟಡ ನಿರ್ಮಿಸಲು, ಬಾಲ ಭವನದ ಕಟ್ಟಡಗಳ ದುರಸ್ತಿ ಇನ್ನಿತರೆ ಕಾರ್ಯ ಕೈಗೊಳ್ಳು ಮತ್ತು ಇತರ ಆಸ್ತಿ ವೆಚ್ಚಗಳನ್ನು ಭರಿಸುವುದು.

[ಎ] ಅವಶ್ಯಕತೆ ಕಂಡಾಗ ಸೊಸೈಟಿಯ ಯಾವುದೇ ವಿಷಯದಲ್ಲಿ ಸಲಹೆ ಪಡೆಯಲು ಮತ್ತು ಅವಶ್ಯಕವಿದ್ದಲ್ಲಿ ಸಲಹಾ ಸಮಿತಿ ಅಥವಾ ಸಲಹಾ ಸಮಿತಿಗಳನ್ನು ರಚಿಸಬಹುದಾಗಿರುತ್ತದೆ.

14. ಸಭೆಗಳು:

1. ಸಾಮಾನ್ಯವಾಗಿ ಸೊಸೈಟಿಯು ಪ್ರತಿ ವರ್ಷಕ್ಕೊಮ್ಮೆ ಸಭೆ ಸೇರಬಹುದಾಗಿರುತ್ತದೆ. ವ್ಯವಸ್ಥಾಪಕ ಸಮಿತಿಯು ಪ್ರತಿ ತಿಂಗಳಿಗೊಮ್ಮೆ ಅಥವಾ ಸೊಸೈಟಿಯ ಕಾರ್ಯಕಲಾಪಗಳ ಯಾವುದೇ ವಿಷಯಗಳನ್ನು ಇತ್ಯರ್ಥಪಡಿಸಲು ಅವಶ್ಯಕವಿದ್ದಲ್ಲಿ ಸಭೆ ಏರ್ಪಡಿಸಬಹುದು.
2. ಯಾವುದೇ ಸಂದರ್ಭದಲ್ಲಿಯೂ ಅಧ್ಯಕ್ಷರು ಸ್ವಯಂ ಇಚ್ಛಿಸಿದಲ್ಲಿ ಅಥವಾ 1/3ನೇ ಭಾಗದ ಸದಸ್ಯರು ಕೋರಿಕೆ ಸಲ್ಲಿಸಿದಲ್ಲಿ ಸೊಸೈಟಿಯ ವಿಶೇಷ ಸಭೆ ಅಥವಾ ವ್ಯವಸ್ಥಾಪಕ ಸಭೆಯನ್ನು ಏರ್ಪಡಿಸಬಹುದು.
3. ತುರ್ತು ಸಂದರ್ಭಗಳನ್ನು ಹೊರತುಪಡಿಸಿ, ಸಭೆ ಸೂಚನಾ ಪತ್ರಗಳನ್ನು 7 ದಿನಗಳ ಮುಂಚಿತವಾಗಿ ಎಲ್ಲಾ ಸದಸ್ಯರಿಗೆ ಕಳುಹಿಸತಕ್ಕದ್ದು.
4. ಯಾವುದೇ ವಿಷಯಗಳ ಇತ್ಯರ್ಥಕ್ಕೆ ಸದಸ್ಯರು ಸರಳ ಮತ ಚಲಾಯಿಸಿ ಬಹುಮತದಿಂದ ಇತ್ಯರ್ಥಪಡಿಸಬಹುದು ಮತ್ತು ಮತಗಳು ಸರಿಸಮನಾಗಿದ್ದಲ್ಲಿ ಅಧ್ಯಕ್ಷರು ನಿರ್ಣಾಯಕ ಮತ ಚಲಾಯಿಸಬಹುದಾಗಿರುತ್ತದೆ

15. ಕೋರಂ [ಕನಿಷ್ಠ ಮಿತಿ] :

ಸೊಸೈಟಿ ಸಭೆಗೆ ಕನಿಷ್ಠ 1/5 ಭಾಗದ ಸದಸ್ಯರಿರತಕ್ಕದ್ದು. ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ಅಧ್ಯಕ್ಷರು ಒಳಗೊಂಡಂತೆ 1/3ನೇ ಭಾಗದ ಸದಸ್ಯರು ಇರತಕ್ಕದ್ದು.

16. ಅಧ್ಯಕ್ಷರ ಅಧಿಕಾರ ಮತ್ತು ಕರ್ತವ್ಯ :

1. ಅಧ್ಯಕ್ಷರು ಬಾಲ ಭವನ ಸೊಸೈಟಿ ಕೆಲಸ ಕಾರ್ಯಗಳನ್ನು ಕಾರ್ಯದರ್ಶಿಗಳ ಮೂಲಕ ನಿರ್ವಹಿಸಿ ಯಶಸ್ವಿ ಆಡಳಿತ ನಿರ್ವಹಣೆಯ ಮೇಲ್ವಿಚಾರಣೆ ಹಾಗೂ ಆಡಳಿತದಲ್ಲಿ ಸಾಮಾನ್ಯ ನಿಯಂತ್ರಣವನ್ನು ಹೊಂದಿರುವುದು.
2. ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ಸಭೆಗಳ ಅಧ್ಯಕ್ಷತೆ ವಹಿಸುವುದು ಮತ್ತು ಸಾಮಾನ್ಯ ಸಭೆ ಮತ್ತು ವ್ಯವಸ್ಥಾಪಕ ಸಮಿತಿ ಸಭೆಯನ್ನು ನಿಯಮಾವಳಿ ಮತ್ತು ನಿಬಂಧನೆಗಳಲ್ಲಿ ಅವಕಾಶವಿರುವಂತೆ ಆಯೋಜಿಸುವುದು.
3. ತುರ್ತು ಸಂದರ್ಭಗಳಲ್ಲಿ ರೂ. 1,000-00ಕ್ಕೆ ಮೀರದ ವೆಚ್ಚವನ್ನು ಅನುಮೋದಿಸುವ ಅಧಿಕಾರ ಮತ್ತು ಈ ವೆಚ್ಚದ ಅನುಮೋದನೆ ಪಡೆಯಲು ಮುಂದಿನ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ಮಂಡಿಸುವುದು.

17. ಉಪಾಧ್ಯಕ್ಷರ ಅಧಿಕಾರ ಮತ್ತು ಕರ್ತವ್ಯ :

ಸಮಿತಿಯ ಉಪಾಧ್ಯಕ್ಷರಿಗೆ ಎಲ್ಲಾ ಅಥವಾ ಯಾವುದಾದರೂ ಅಧಿಕಾರ ಚಲಾಯಿಸಲು ಸಮಿತಿಯ ಅಧ್ಯಕ್ಷರು ಸ್ವತ: ನಿಯೋಗಿಸಬಹುದು.

ಅಧ್ಯಕ್ಷರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರು ಸೊಸೈಟಿ ಸಭೆಯ ಅಧ್ಯಕ್ಷತೆ ವಹಿಸಬಹುದು.

18. ಕಾರ್ಯದರ್ಶಿಗಳ ಅಧಿಕಾರ ಮತ್ತು ಕರ್ತವ್ಯ :

ಸಮಿತಿಯ ಕಾರ್ಯದರ್ಶಿಗಳು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿದ್ದು, ಮತ್ತು

1. ಸಮಿತಿಯು ವಹಿಸುವ ಯಾವುದೇ ಕರ್ತವ್ಯಗಳನ್ನು ನಿರ್ವಹಿಸುವುದು ಮತ್ತು ಸೊಸೈಟಿಯ ಯಾವುದೇ ಕಾರ್ಯಕ್ರಮಗಳನ್ನು ತಮ್ಮ ಅಧೀನದಲ್ಲಿರುವ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದ ಮೂಲಕ ಅನುಷ್ಠಾನಗೊಳಿಸುವುದು.
2. ಸಮಿತಿಯ ನಿರ್ದೇಶನದಂತೆ ಸಮಿತಿಯ ಪರವಾಗಿ ಅಧಿಕಾರಕ್ಕನುಸರಿಸಿದಂತೆ ಕರಾರು [ಒಪ್ಪಂದ] ಗಳಿಗೆ ಪ್ರತಿನಿಧಿಸುವುದು.
3. ಆಸ್ತಿ ಮತ್ತು ಸಾಧನ ಸಲಕರಣೆಗಳ ರಕ್ಷಣಾಧಾರಗಳ ನಿರ್ವಹಣೆ ಮತ್ತು ಸೂಕ್ತ ಸಂರಕ್ಷಣೆಯ ಭರವಸೆ ಹೊಂದುವುದು.
4. ಅಧ್ಯಕ್ಷರ ನಿರ್ದೇಶನದಂತೆ ಸಮಿತಿ ಸಭೆಗಳನ್ನು ಆಯೋಜಿಸುವುದು ಮತ್ತು ಅಧ್ಯಕ್ಷರ ಅನುಮೋದನೆಯ ನಂತರ ಸಮಿತಿ ಸಭೆಯ ನಡವಳಿಯನ್ನು ನಿರ್ವಹಿಸುವುದು.
5. ತಮ್ಮ ಕಛೇರಿಯ ಸಾಮಾನ್ಯ ಕ್ರಮಬದ್ಧವಾದ ದಾಖಲೆಗಳು ವಹಿಗಳನ್ನು ನಿರ್ವಹಿಸುವುದರೊಂದಿಗೆ ಸಮಿತಿಯ ನಿರ್ದೇಶನದಂತೆ ದಾಖಲೆ ಮತ್ತು ವಹಿಗಳನ್ನು ನಿರ್ವಹಿಸುವುದು.

6. ಲೆಕ್ಕ ಪರಿಶೋದನೆಗೊಂಡ ಆದಾಯ ಮತ್ತು ವೆಚ್ಚದ ತ:ಖ್ತೆಗಳೊಂದಿಗೆ ಕಾರ್ಯ ಯೋಜನೆಗಳು ಮತ್ತು ಚಟುವಟಿಕೆಗಳ ವಾರ್ಷಿಕ ವರದಿಯನ್ನು ಅಧ್ಯಕ್ಷರ ಅನುಮೋದನೆಯ ನಂತರ ಸೊಸೈಟಿಯ ವಾರ್ಷಿಕ ಸಭೆಯಲ್ಲಿ ಮಂಡಿಸುವುದು.
7. ಲೆಕ್ಕಪತ್ರಗಳನ್ನು ದಾಖಲಿಸುವುದು: ಕಾರ್ಯದರ್ಶಿಯವರು ಸೊಸೈಟಿಯ ಸರ್ವಸದಸ್ಯರ ಸಾಮಾನ್ಯ ಸಭೆ ನಡೆದ 14ನೇ ದಿನ ಅಥವಾ ಮುಂಚಿತವಾಗಿ ಲೆಕ್ಕ ಪರಿಶೋಧನೆಗೊಂಡ ಲೆಕ್ಕಪತ್ರಗಳ ಪ್ರತಿಗಳು, ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ ಮತ್ತು ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಗಳನ್ನು ಸಂಘಗಳ ನೋಂದಾಣಿಧಿಕಾರಿಯವರಲ್ಲಿ ದಾಖಲಿಸತಕ್ಕದ್ದು.

19, ಸಿಬ್ಬಂದಿಗಳು:

ರಾಜ್ಯ ಸರ್ಕಾರದಿಂದ ನಿಯೋಜಿಸಲ್ಪಡುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಸೊಸೈಟಿಯು ನೇಮಕ ಮಾಡಬಹುದಾಗಿರುತ್ತದೆ.

–ooOOOOOoo–

**ಅಧ್ಯಕ್ಷರು**

↓

ಸದಸ್ಯರು ಸದಸ್ಯರು ಸದ್ಯಸರು ಸದಸ್ಯರು ಸದಸ್ಯರು

↓

**ಕಾರ್ಯದರ್ಶಿಗಳು-ಸದಸ್ಯ ಕಾರ್ಯದರ್ಶಿಗಳು**

↓

**ಆಡಳಿತಾಧಿಕಾರಿಗಳು***

<u>ಸರ್ಕಾರದ ನಿಯೋಜನೆ ಮೇರೆಗೆ</u>

- ಲೆಕ್ಕ ಅಧೀಕ್ಷಕರು (1) *
- ಥಿಯೇಟರ್ ಮ್ಯಾನೇಜರ್ *
- ಪ್ರ ದ ಸ ( 1) *
- ಪ್ರೊಜೆಕ್ಷನಿಸ್ಟ್ –[1] *
- ಅಸಿಸ್ಟೆಂಟ್ ಪ್ರೊಜೆಕ್ಷನಿಸ್ಟ್ *
- ತಾಂತ್ರಿಕ ಸಹಾಯಕರು (1) *
- ಜೂನಿಯರ್ ಸ್ಟೆನೋ/ಟೈಪಿಸ್ಟ್ *
- ಪ್ರೊ ಜೆಕ್ಷನಿಸ್ಟ್ (1) *

<u>* ಹುದ್ದೆ ಖಾಲಿ ಇರುತ್ತದೆ</u>

<u>ಬಾಲ ಭವನ ಸೊಸೈಟಿ</u>

- ಶೀಘ್ರಲಿಪಿಗಾರರು/ಅಧ್ಯಕ್ಷರ ಆಪ್ತ ಸಹಾಯಕರು (1)
- ಲೆಕ್ಕ ಸಹಾಯಕರು (1)
- ಕಾರ್ಯಕ್ರಮ ಸಹಾಯಕರು (1)
- ಚಾಲಕರು (6)
- (ಅಧ್ಯಕ್ಷರ ವಾಹನ ಚಾಲಕರು,ಕಾರ್ಯದರ್ಶಿಗಳ ವಾಹನ ಚಾಲಕರು,ಬಸ್ ಚಾಲಕರು,ಪುಟಾಣಿ ರೈಲು ಚಾಲಕರು, ಬೋಟಿಂಗ್ ಅಪರೇಟರ್ಸ್–(2)

<u>ಗ್ರೂಪ್ ಡಿ ವೃ0ದ</u>

- ವಾರ್ಡನ್(4)
- ಪ್ಯಾಕೇಜ್ ಪ್ರೋಗ್ರಾಮ್ ಅಸಿಸ್ಟೆಂಟ್(2)
- ಬೋಟಿ0ಗ್ ಅಸಿಸ್ಟೆಂಟ್ (1)
- ಬುಕ್ಕಿಂಗ್ ಅಸಿಸ್ಟೆಂಟ್(1)
- ಪೇಂಟರ್(1)
- ಕಛೇರಿ ಜವಾನ(1)
- ಕಾವಲುಗಾರರು(11)
- ತೋಟಗಾರರು(8) / ಸ್ವಚ್ಛಗಾರರು(9)

- **<u>ಆಯ-ವ್ಯಯ</u>** : ಪ್ರತಿ ವರ್ಷ ಲೆಕ್ಕ ಶೀರ್ಷಿಕೆ 2235-02-102-0-99-101 / 103 (ಯೋಜನೆ) ಅಡಿಯಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಬಾಲ ಭವನಗಳ ಅಭಿವೃದ್ಧಿಗಳಗಾಗಿ ಹಾಗೂ ಯೋಜನೇತರ ಅಡಿಯಲ್ಲಿ ರಾಜ್ಯ ಬಾಲ ಭವನದ ಆಡಳಿತಾತ್ಮಕ ನಿರ್ವಹಣೆಗಾಗಿ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

**ಅನುದಾನದ ವಿವರಗಳು**

| **ನಿಗದಿತ ಅನುದಾನ ಯೋಜನೆ** | **ಸ್ವೀಕರಿಸಿದ ಅನುದಾನ ಯೋಜನೆ** |
|---|---|
| 2017-18 | 2017-18 |
| **521.00 ಲಕ್ಷಗಳಲ್ಲಿ** | **521.00 ಲಕ್ಷಗಳಲ್ಲಿ** |

| **ನಿಗದಿತ ಅನುದಾನ ಯೋಜನೇತರ** | **ಸ್ವೀಕರಿಸಿದ ಅನುದಾನ ಯೋಜನೇತರ** |
|---|---|
| 2017-18 | 2017-18 |
| **144.94 ಲಕ್ಷಗಳಲ್ಲಿ** | **144.94 ಲಕ್ಷಗಳಲ್ಲಿ** |

**<u>2017-18ನೇ ಸಾಲಿಗೆ ಸರ್ಕಾರದಿಂದ ಬಾಲ ಭವನ ಸೊಸೈಟಿಗೆ ಸ್ವೀಕರಿಸಿರುವ ಅನುದಾನದ ವಿವರ</u>**

| **ಕ್ರಮ ಸಂಖ್ಯೆ** | **ಯೋಜನೆ ಶೀರ್ಷಿಕೆಯಲ್ಲಿ ಬಿಡುಗಡೆಯಾದ ವಿವರ** | **ಬಿಡುಗಡೆಯಾದ ಅನುದಾನ [ಲಕ್ಷಗಳಲ್ಲಿ** |
|---|---|---|
| 1 | ಸರ್ಕಾರದ ಆದೇಶ ಸಂಖ್ಯೆ: ಮಮಇ 06 ರಾಮ ಆ2017 ದಿ: 29-07-2017 | 130.25 |
| 2 | ಸರ್ಕಾರದ ಆದೇಶ ಸಂಖ್ಯೆ: ಮಮಇ 06 ರಾಮ ಆ2017 ದಿನಾಂಕ: 25-09-2017 | 130.25 |
| 3 | ಸರ್ಕಾರದ ಆದೇಶ ಸಂಖ್ಯೆ: ಮಮಇ 06 ರಾಮ ಆ2017 ದಿನಾಂಕ: 04-11-2017 | 130.25 |
| 4 | ಸರ್ಕಾರದ ಆದೇಶ ಸಂಖ್ಯೆ: ಮಮಇ 06 ರಾಮ ಆ2017 ದಿನಾಂಕ: 31-01-2018 | 130.25 |
| | **ಒಟ್ಟು** | **521.00** |

| **ಕ್ರಮ ಸಂಖ್ಯೆ** | **ಯೋಜನೇತರ ಶೀರ್ಷಿಕೆಯಲ್ಲಿ ಬಿಡುಗಡೆಯಾದ ವಿವರ** | **ಬಿಡುಗಡೆಯಾದ ಅನುದಾನ [ಲಕ್ಷಗಳಲ್ಲಿ** |
|---|---|---|
| 1 | ಸರ್ಕಾರದ ಆದೇಶ ಸಂಖ್ಯೆ: ಮಮಇ 06 ರಾಮ ಆ2017 ದಿನಾಂಕ: 29-07-2017 | 36.24 |
| 2 | ಸರ್ಕಾರದ ಆದೇಶ ಸಂಖ್ಯೆ: ಮಮಇ 06 ರಾಮ ಆ2017 ದಿನಾಂಕ: 25-09-2017 | 36.24 |
| 3 | ಸರ್ಕಾರದ ಆದೇಶ ಸಂಖ್ಯೆ: ಮಮಇ 06 ರಾಮ ಆ2017 ದಿನಾಂಕ: 04-11-2017 | 36.24 |
| 4 | ಸರ್ಕಾರದ ಆದೇಶ ಸಂಖ್ಯೆ: ಮಮಇ 06 ರಾಮ ಆ2017 ದಿನಾಂಕ: 31-01-2018 | 36.24 |
| | **ಒಟ್ಟು** | **144.94** |

## ಬಾಲ ಭವನ ಸೊಸೈಟಿ, ಕಬ್ಬನ್ ಪಾರ್ಕ್ ಇಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ವಿವರ

| ಕ್ರ. ಸಂ | ಹುದ್ದೆಯ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ | ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| | ಗ್ರೂಪ್ – ಎ | | | | |
| 01 | ಕಾರ್ಯದರ್ಶಿಗಳು | 1 | 40050-56550 | [ಪ್ರಭಾರ] | 1 |
| 02 | ಆಡಳಿತಾಧಿಕಾರಿಗಳು | 1 | 36300-53850 | – | 1 |
| | ಗ್ರೂಪ್ – ಬಿ | | | | |
| 03 | ಅಕೌಂಟ್ಸ್ ಸೂಪರಿಡೆಂಟ್ | 1 | 21600-40050 | – | 1 |
| | ಗ್ರೂಪ್ –.ಸಿ | | | | |
| 04 | ಫಸ್ಟ್ ಡಿವಿಜನ್ ಕ್ಲರ್ಕ್ | 1 | 14550-26700 | 1 | – |
| 05 | ಕಛೇರಿ ಸಹಾಯಕರು | 1 | 14550-26700 | | 1 |
| 06 | ಥಿಯೇಟರ್ ಮ್ಯಾನೇಜರ್ | 1 | 20000-36300 | – | 1 |
| 07 | ಪ್ರೊಜೆಕ್ಷನಿಸ್ಟ್ | 1 | 16000-29600 | – | 1 |
| 08 | ಅಸಿಸ್ಟೆಂಟ್ ಪ್ರೊಜೆಕ್ಷನಿಸ್ಟ್ | 1 | | – | 1 |
| 09 | ಟೆಕ್ನಿಕಲ್ ಅಸಿಸ್ಟೆಂಟ್ | 1 | 16000-29600 | – | 1 |
| 10 | ಜೂನಿಯರ್ ಸ್ಟೆನೋ-ಟೈಪಿಸ್ಟ್ | 1 | 11600-21000 | – | 1 |
| 11 | ಡ್ರೈವರ್ [ಟಾಯ್ ಟ್ರೈನ್] | 1 | 14550-26700 | – | 1 |
| 12 | ಡ್ರೈವರ್ [ಮೋಟರ್ ವೆಹಿಕಲ್] | 3 | 11600-21000 | – | 3 |
| 13 | ಸ್ಟೇಜ್ ಅಸಿಸ್ಟೆಂಟ್ | 1 | 11600-21000 | – | 1 |
| 14 | ಗ್ರೂಪ್ – ಡಿ | | | | |
| 15 | ಎಲೆಕ್ಟ್ರಿಷಿಯನ್ [ಸೌಂಡ್ ಅಂಡ್ ಎಲೆಕ್ಟ್ರಿಕಲ್ ಸೆಕ್ಷನ್] | 1 | 9600-14550 | – | 1 |
| | ಒಟ್ಟು | 16 | | 01 | 15 |

ಕಾರ್ಯದರ್ಶಿಗಳು,
ಬಾಲ ಭವನ ಸೊಸೈಟಿ ಬೆಂಗಳೂರು.

**ಬಾಲ ಭವನ ಸೊಸೈಟಿಯಲ್ಲಿ ಸೃಜಿಸಲಾದ/ ಕಾರ್ಯ ನಿರ್ವಹಿಸುತ್ತಿರುವ/ಖಾಲಿಯಿರುವ ಹುದ್ದೆಗಳ ವಿವರ**

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಸೊಸೈಟಿ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ | ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| 01 | ಶೀಘ್ರಲಿಪಿಗಾರರು/ಅಧ್ಯಕ್ಷರ ಆಪ್ತ ಸಹಾಯಕರು | 01 | 14550-26700 | 01 | - |
| 02 | ಲೆಕ್ಕ ಸಹಾಯಕರು | 01 | 14550-26700 | 01 | 01 |
| 03 | ಕಾರ್ಯಕ್ರಮ ಸಹಾಯಕರು/ ಸ್ಟೇಜ್ ಹ್ಯಾಂಡ್ | 02 | 11600-21000 | | |
| 04 | ಬೆರಳಚ್ಚುಗಾರರು | 01 | 11600-21000 | 01 | - |
| 05 | ಪುಠಾಣಿ ರೈಲು ಚಾಲಕರು | 01 | 11600-21000 | 01 | - |
| 06 | ವಾಹನ ಚಾಲಕರು | 03 | 11600-21000 | 03 | - |
| 07 | ಬೋಟ್ ಆಪರೇಟರ್‌ಗಳು | 02 | 10400-16400 | 01 | 01 |
| 08 | ಸ್ವೀಪರ್ಸ್/ಗಾರ್ಡನರ್ಸ್/ಪಿಪಿ ಅಸಿಸ್ಟೆಂಟ್ಸ್/ಬುಕ್ಕಿಂಗ್ ಅಸಿಸ್ಟೆಂಟ್ಸ್/ ವಾರ್ಡನ್ಸ್/ಕಾವಲುಗಾರರು | 44 | 9600-14550 | 34 | 14 |
| 09 | ಕಛೇರಿ ಜವಾನ | 01 | 9600-14550 | 1 | - |
| | **ಒಟ್ಟು** | **57** | | **41** | **16** |

**ಕಾರ್ಯದರ್ಶಿಗಳು,**
**ಬಾಲಭವನ ಸೊಸೈಟಿ,ಬೆಂಗಳೂರು**

## ಬಾಲ ಭವನ ಸೊಸೈಟಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಿವರ

| ಕ್ರಮ ಸಂಖ್ಯೆ | ನೌಕರರ ಹೆಸರು ಶ್ರೀ\ಶ್ರೀಮತಿ | ಹುದ್ದೆ | ಕರ್ತವ್ಯದ ವಿವರ |
|---|---|---|---|
| 1 | 2 | 3 | 4 |
| 1 | ರಮೇಶ ಕುಮಾರ್ .ಎಸ್ | ಶೀಘ್ರಲಿಪಿಗಾರರು/ಅಧ್ಯಕ್ಷರ ಆಪ್ತ ಸಹಾಯಕರು | ಬಾಲಭವನದ ಅಭಿವೃದ್ಧಿ ಕಾಮಗಾರಿ ಗಳು, ಅಕೌಂಟ್ಸ್ ನಿರ್ವಹಣೆ ಅಧ್ಯಕ್ಷರ ಆಪ್ತ ಶಾಖೆಗೆ ಸಂಬಂಧಿಸಿದ ಕರ್ತವ್ಯಗಳು |
| 2 | ವಿನಂತಿ ವಿ. | ಕಾರ್ಯಕ್ರಮ ಸಹಾಯಕರು | ಆಯ-ವ್ಯಯ, ಎಂಪಿಕ್, ಬೇಸಿಗೆ ಶಿಬಿರ, ವಾರ್ಷಿಕ ಶಿಬಿರ, ಕಲಾಶ್ರೀ ಶಿಬಿರ, ಎಲ್ಲಾ ಯೋಜನೆ/ಕಾರ್ಯ ಕ್ರಮಗಳು, ಕೇಂದ್ರ ಬಾಲ ಭವನ, ಮಿನಿ ಬಾಲ ಭವನಗಳು ಸೇರಿದಂತೆ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನ ನಿರ್ವಹಣೆ ಹಾಗೂ ವೆಬ್‌ಸೈಟ್ ಕಡತ ನಿರ್ವಹಣೆ |
| 3 | ಬಾಲಚಂದ್ರರಾಜು ಕೆ.ಬಿ | ಪುಟಾಣಿ ರೈಲು ಚಾಲಕರು | ಪುಟಾಣಿ ರೈಲು ಚಾಲಕರಾಗಿ ಕರ್ತವ್ಯ ನಿರ್ವಹಣೆ |
| 4 | ನರಸಿಂಹ ಮೂರ್ತಿ ಎಸ್.ಕೆ. | ವಾಹನ ಚಾಲಕರು | ಕೆ.ಎ.20 ಜಿ. 0498 ವಾಹನದ ಚಾಲಕರಾಗಿ ಕರ್ತವ್ಯ ನಿರ್ವಹಣೆ |
| 5 | ರವಿಚಂದ್ರ.ಎ | ವಾಹನ ಚಾಲಕರು | ಕೆ.ಎ.01 ಜಿ. 8514 ವಾಹನದ ಚಾಲಕರಾಗಿ ಕರ್ತವ್ಯ ನಿರ್ವಹಣೆ |
| 6 | ಪುಟ್ಟರಾಜು ಎಂ. | ವಾಹನ ಚಾಲಕರು | ಕಾರ್ಯದರ್ಶಿಗಳ ವಾಹನ ಚಾಲಕರಾಗಿ ಕರ್ತವ್ಯ ನಿರ್ವಹಣೆ |
| 7 | ರಾಮಸ್ವಾಮಿ | ದೋಣಿ ಚಾಲಕರು | ದೋಣಿ ಚಾಲಕರಾಗಿ ಕರ್ತವ್ಯ ನಿರ್ವಹಣೆ |
| 8 | ಮನೋಹರನ್.ಆರ್ | ಪ್ಯಾಕೇಜ್ ಪ್ರೋಗ್ರಾಂ ಸಹಾಯಕರು | ರಾಜಾಜಿನಗರ ಮಿನಿ ಬಾಲ ಭವನದಲ್ಲಿ ಕರ್ತವ್ಯ ನಿರ್ವಹಣೆ |
| 9 | ಬಸವರಾಜು ಕೆ.ಬಿ. | ಪ್ಯಾಕೇಜ್ ಪ್ರೆಗ್ರಾಂ ಸಹಾಯಕರು | ಬಾಲ ಭವನದ ಆಡಳಿತ ಕಛೇರಿಯಲ್ಲಿ ಕಚೇರಿ ಸಹಾಯಕರಾಗಿ ಕರ್ತವ್ಯ ನಿರ್ವಹಣೆ |
| 10 | ಸುರೇಶ್‌ಬಾಬು ಡಿ. | ಬುಕ್ಕಿಂಗ್ ಅಸಿಸ್ಟೆಂಟ್ | ಸಚಿವಾಲಯದಲ್ಲಿ ಕರ್ತವ್ಯ ನಿರ್ವಹಣೆ |
| 11 | ಲಕ್ಷ್ಮಣಗೌಡ ಕೆ.ಟಿ. | ತೋಟಗಾರರು | ಅನಧೀಕೃತ ಗೈರು ಹಾಜರಿ |
| 12 | ರಾಮಚಂದ್ರ.ಎಂ | ತೋಟಗಾರರು | ಆವರಣದ ತೋಟಗಾರಿಕೆ ಕರ್ತವ್ಯ ನಿರ್ವಹಣೆ |
| 13 | ನರಸಿಂಹಮೂರ್ತಿ ಜಿ.ಎನ್. | ತೋಟಗಾರರು | ಆವರಣದ ತೋಟಗಾರಿಕೆ ಕರ್ತವ್ಯ ನಿರ್ವಹಣೆ |
| 14 | ವೇಲು ಜೆ. | ಪೆಯಿಂಟರ್ | ಬಾಲ ಭವನದ ಹುಟ್ಟು ಹಬ್ಬದ ಆವರಣದ ನಿರ್ವಹಣೆ/ಟಪಾಲು ಕರ್ತವ್ಯ |
| 15 | ಎಲ್. ಶೋಭಾದೇವಿ | ವಾರ್ಡನ್ | ಸಮಗ್ರ ಕಾರ್ಯಕ್ರಮ, ಹುಟ್ಟುಹಬ್ಬ, ರಂಗಮಂದಿರ ಕಾಯ್ದಿರಿಸುವ ಕರ್ತವ್ಯ. ಸ್ವಿಕೃತಿ-ರವಾನೆ ಕರ್ತವ್ಯ |

. . . . . 2ನೇ ಪುಟಕ್ಕೆ



| 1 | 2 | 3 | 4 |
|---|---|---|---|
| 16 | ಕೃಷ್ಣಾರೆಡ್ಡಿ .ವಿ | ವಾರ್ಡನ್ | ರಂಗಮಂದಿರ, ಬಾಲ ವೇದಿಕೆ ಕಾರ್ಯಕ್ರಮಗಳಿಗೆ ಹಾಗೂ ಅವರಣದ ವಿದ್ಯುತ್ ದೀಪಗಳ ನಿರ್ವಹಣೆ |
| 17 | ಮಹೇಶ್ವರಪ್ಪ ಎಸ್.ಎನ್. | ವಾರ್ಡನ್ | ಆವರಣದ ಮೇಲುಸ್ತುವಾರಿ |
| 18 | ಶಿವಶಂಕರ | ಬಸ್ ಕ್ಲೀನರ್ | ಅನಧಿಕೃತ ಗೈರು ಹಾಜರಿ |
| 19 | ಸರಸ್ವತಮ್ಮ | ಸ್ವಚ್ಛಗಾರರು | ಆವರಣದ ಸ್ವಚ್ಛತಾ ಕಾರ್ಯ ನಿರ್ವಹಣೆ |
| 20 | ಲಕ್ಷ್ಮಮ್ಮ | ಸ್ವಚ್ಛಗಾರರು | ಆವರಣದ ಸ್ವಚ್ಛತಾ ಕಾರ್ಯ ನಿರ್ವಹಣೆ |
| 21 | ಹೋಬಳಯ್ಯ | ಬಸ್ ಕ್ಲೀನರ್ | ಕೆ.ಎ.01 ಜಿ.8514 ಬಸ್ಸಿನ ಕ್ಲೀನರ್ ಕರ್ತವ್ಯ ನಿರ್ವಹಣೆ |
| 22 | ಗೌರಮ್ಮ | ಸ್ವಚ್ಛಗಾರರು | ಆವರಣದ ಸ್ವಚ್ಛತಾ ಕಾರ್ಯ ನಿರ್ವಹಣೆ |
| 23 | ಅನಸೂಯಮ್ಮ | ಸ್ವಚ್ಛಗಾರರು | ಆವರಣದ ಸ್ವಚ್ಛತಾ ಕಾರ್ಯ ನಿರ್ವಹಣೆ |
| 24 | ಮುನಿರಾಜು | ಕಾವಲುಗಾರರು | ಆವರಣದ ತೋಟಗಾರಿಕೆ ಕರ್ತವ್ಯ ನಿರ್ವಹಣೆ |
| 25 | ವಿಜಯಚಂದ್ರರೆಡ್ಡಿ | ಕಾವಲುಗಾರರು | ಪುಟಾಣಿ ರೈಲು ಬಳಿ ಟಿಕೇಟ್ ಪಚಿಂಗ್ ಕರ್ತವ್ಯ |
| 26 | ಉದಯಶಂಕರ | ಕಾವಲುಗಾರರು | ಆವರಣದ ಸ್ಥಿರ ಆಟಿಕೆಗಳ ನಿರ್ವಹಣೆ |
| 27 | ಹನುಮೇಗೌಡ | ಕಾವಲುಗಾರರು | ಆಫ್ ರೀಲೀವರ್ ಕಾವಲುಗಾರರಾಗಿ ಕರ್ತವ್ಯ ನಿರ್ವಹಣೆ |
| 28 | ಶಿವರಾಂ ಹೆಚ್. | ಕಾವಲುಗಾರರು | ರಾತ್ರಿ ಪಾಳಿಯಲ್ಲಿ ಕಾವಲುಗಾರರಾಗಿ ಕರ್ತವ್ಯ ನಿರ್ವಹಣೆ |
| 29 | ಚಿಕ್ಕತಾಯಿ | ಸ್ವಚ್ಛಗಾರರು | ರಂಗಮಂದಿರ ಹಾಗೂ ಆವರಣದ ಸ್ವಚ್ಛತಾ ಕಾರ್ಯ ನಿರ್ವಹಣೆ |
| 30 | ಬಸವರಾಜು | ಕಾವಲುಗಾರರು | ಪುಟಾಣಿ ರೈಲು ಬಳಿ ಟಿಕೇಟ್ ವಿತರಣೆ ಕರ್ತವ್ಯ |
| 31 | ವೆಂಕಟೇಶಮೂರ್ತಿ | ಕಾವಲುಗಾರರು | 2ನೇ ಪಾಳಿಯ ಕಾವಲುಗಾರರಾಗಿ ಕರ್ತವ್ಯ ನಿರ್ವಹಣೆ |
| 32 | ಪ್ರಕಾಶ್ ಜಿ. | ಕಾವಲುಗಾರರು | ಕೋಲ್ಸ್ ಪಾರ್ಕ್ ಮಿನಿ ಬಾಲ ಭವನದಲ್ಲಿ ಕಾವಲುಗಾರರಾಗಿ ಕರ್ತವ್ಯ ನಿರ್ವಹಣೆ |
| 33 | ಚಂದ್ರಶೇಖರ್ | ತೋಟಗಾರರು | ಆವರಣದ ತೋಟಗಾರಿಕೆ ಕರ್ತವ್ಯ ನಿರ್ವಹಣೆ |
| 34 | ವಿಜಯಾನಂದನ್ | ಕಾವಲುಗಾರರು | ಪುಟಾಣಿ ರೈಲುಲ ಸಹಾಯಕರಾಗಿ ಕರ್ತವ್ಯ ನಿರ್ವಹಣೆ |
| 35 | ಮಲ್ಲೇಶ್ ಎಂ. | ತೋಟಗಾರರು | ಆವರಣದ ತೋಟಗಾರಿಕೆ ಕರ್ತವ್ಯ ನಿರ್ವಹಣೆ |
| 36 | ಶಂಕರ | ಕಾವಲುಗಾರರು | ಜಯನಗರ ಮಿನಿ ಬಾಲ ಭವನದಲ್ಲಿ ಕಾವಲುಗಾರರಾಗಿ ಕರ್ತವ್ಯ ನಿರ್ವಹಣೆ |
| 37 | ಸತೀಶ್ ಎಸ್. | ಗ್ರೂಪ್ ಡಿ ನೌಕರ | ಕಛೇರಿಯಲ್ಲಿ ಪೀವನ್ ಕರ್ತವ್ಯ |
| 38 | ರುಕ್ಮಿಣಿ | ಸ್ವಚ್ಛಗಾರರು | ಆವರಣದ ಸ್ವಚ್ಛತಾ ಕಾರ್ಯ ನಿರ್ವಹಣೆ |

. . . . . 3ನೇ ಪುಟಕ್ಕೆ

| 1 | 2 | 3 | 4 |
|---|---|---|---|
| 39 | ಅಮರೇಶ್ | ಕಾವಲುಗಾರರು | ಆವರಣದ ಸ್ಥಿರ ಅಟಿಕೆಗಳ ನಿರ್ವಹಣೆ |
| 40 | ಕೃಷ್ಣಾನಾಯಕ್ ಕೆ.ಟಿ. | ಬೆರಳಚ್ಚುಗಾರರು | ಮಾನ್ಯ ವಿಧಾನ ಪರಿಷತ್ ಸದಸ್ಯರ ಆಪ್ತ ಸಹಾಯಕರಾಗಿ ನಿಯೋಜನೆ |
| 41 | ಶ್ರೀ ಕೆ.ಚಾಂದ್ | ಬೋಟ್ ಆಪರೇಟರ್ | ಕಾರವಾರ ಜಿಲ್ಲಾ ಬಾಲ ಭವನಕ್ಕೆ ನಿಯೋಜನೆ |

**ಕಾರ್ಯದರ್ಶಿಗಳು,**
**ಬಾಲಭವನ ಸೊಸೈಟಿ,ಬೆಂಗಳೂರು**

# <u>ಬಾಲ ಭವನ ಸೊಸೈಟಿ, ಕಬ್ಬನ್ ಉದ್ಯಾನವನ, ಬೆಂಗಳೂರು</u>

## <u>ಪೀಠಿಕೆ</u>

**ಜವಾಹರ ಬಾಲ ಭವನವು 1967 ರಿಂದ ಕಬ್ಬನ್ ಉದ್ಯಾನವನದ ಒಂದು ಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದೆ. 1985 ರಲ್ಲಿ ಸರ್ಕಾರವು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ, ಹೆಚ್ಚೆಚ್ಚು ಶೀಘ್ರವಾಗಿ ಅನುಷ್ಠಾನಗೊಳಸುವ ಸಲುವಾಗಿ ಸೊಸೈಟಿ ಕಾಯ್ದೆ ಅಡಿಯಲ್ಲಿ ಬಾಲ ಭವನ ಸೊಸೈಟಿಯನ್ನು ರಚಿಸಿದ್ದು, ಈಗ ಬಾಲ ಭವನ ಸೊಸೈಟಿ ಒಂದು ಸ್ವಾಯತ್ತ ಸಂಸ್ಥೆಯಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಬಾಲ ಭವನ ಸೊಸೈಟಿ ಕಾರ್ಯ ವ್ಯಾಪ್ತಿಯು ರಾಜ್ಯಾದ್ಯಂತ ಇರುತ್ತದೆ.**

**ರಾಜ್ಯದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಬಾಲ ಭವನಗಳಿದ್ದು, ಮಕ್ಕಳ ಮನರಂಜನೆ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ನಡೆಸುತ್ತಿದ್ದು, ಜಿಲ್ಲಾ ಬಾಲ ಭವನಗಳಿಗೆ, ಆಯಾಯ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಗಳು ಅಧ್ಯಕ್ಷರಾಗಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರುಗಳು ಕಾರ್ಯದರ್ಶಿಗಳಾಗಿ ಮತ್ತು ವಿವಿಧ ಸರ್ಕಾರಿ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಿದ್ದು ತಾಲ್ಲೂಕು ಮಟ್ಟದ ಬಾಲ ಭವನಗಳಿಗೆ ಉಪ ವಿಭಾಗಾಧಿಕಾರಿಗಳು ಅಧ್ಯಕ್ಷರಾಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕಾರ್ಯದರ್ಶಿಗಳಾಗಿ ಇತರೆ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಸಮಿತಿ ಇದ್ದು, ಬಾಲ ಭವನಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.**

## <u>ಉದ್ದೇಶಗಳು</u>

1. ಸಮಾಜದ ಎಲ್ಲಾ ಪ್ರಾಕಾರಗಳ ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರಹೊಮ್ಮಿಸಿ ಮಕ್ಕಳಲ್ಲಿ ಭರವಸೆ, ವ್ಯಕ್ತಿತ್ವ ವಿಕಸನೆ, ಆತ್ಮ ಸ್ಥೈರ್ಯ ಮೂಡಿಸುವುದು.
2. ಬಾಲ ಭವನ್ ಮೆಥೆಡ್ ಆಫ್ ಆರ್ಟ್ ಎಜುಕೇಷನ್ ಮೂಲಕ ಮಕ್ಕಳ ಶಾಲಾ ಪಠ್ಯೇತರ ಕ್ರಿಯಾತ್ಮಕ ಹಾಗೂ ಸೃಜನಾತ್ಮಕ ಚಟುವಟಿಕೆಯನ್ನು ನಡೆಸುವುದು.
3. ಮಕ್ಕಳಿಗೆ ಮನರಂಜನಾ ಸೌಲಭ್ಯಗಳನ್ನು ವಿಸ್ತರಿಸುವುದು.

ಮಕ್ಕಳಿಗೆ ಶಾಲಾ ಹೊರಗಿನ ಪಠ್ಯೇತರ ಕಾರ್ಯಕ್ರಮ, ಕ್ರಿಯಾತ್ಮಕ ಚಟುವಟಿಕೆ, ಪ್ರಕೃತಿ ಹಾಗೂ ಸಾಹಸ ಶಿಬಿರ, ರಂಗ ಪ್ರಯೋಗಗಳು, ಮಕ್ಕಳ ಮನರಂಜನೆ, ಹೀಗೆ ಹತ್ತು ಹಲವಾರು ವೈವಿಧ್ಯಮಯ ಪ್ರಕಾರಗಳಲ್ಲಿ ಮಕ್ಕಳಲ್ಲಿ ಹುದುಗಿರುವ ಸೃಜನಾತ್ಮಕ ಪ್ರತಿಭೆಯನ್ನು ಹೊರ ಹೊಮ್ಮಿಸಿ ಬೆಳೆಸುವುದು ಬಾಲ ಭವನದ ಮೂಲ ಉದ್ದೇಶವಾಗಿದೆ.

ಪ್ರಸ್ತುತ ಬಾಲ ಭವನದಲ್ಲಿ ಮಕ್ಕಳಿಗಾಗಿ ಯೋಜಿಸಿರುವ ಕ್ರಿಯಾತ್ಮಕ, ಸೃಜನಾತ್ಮಕ ಹಾಗೂ ಮನರಂಜನಾ ಕಾರ್ಯಕ್ರಮ ಚಟುವಟಿಕೆಗಳ ವಿವರಗಳು ಈ ಕೆಳಕಂಡಂತಿರುತ್ತವೆ.

## <u>ಕಾರ್ಯಕ್ರಮಗಳು</u>

1. ಬೇಸಿಗೆ ಶಿಬಿರ
2. ವಾರ್ಷಿಕ ಶಿಬಿರ
3. ಬಾಲಶ್ರೀ ಪ್ರಶಸ್ತಿಗೆ ಸ್ಥಳೀಯ ಮಟ್ಟದ ಆಯ್ಕೆ ಶಿಬಿರ

. . . . 2

4. ಚಿಣ್ಣರ ಕಲಾಶ್ರೀ ಪ್ರಶಸ್ತಿ ಪ್ರದಾನಕ್ಕೆ ಆಯ್ಕೆ ಶಿಬಿರ
5. ರಾಷ್ಟ್ರೀಯ ಹಬ್ಬಗಳ ಆಚರಣೆ
6. ಮಕ್ಕಳ ಸದಸ್ಯತ್ವ
7. ಶಾಲಾ ಮಕ್ಕಳಗಾಗಿ ಸಮಗ್ರ ಕಾರ್ಯಕ್ರಮ ಯೋಜನೆ
8. ಮಕ್ಕಳ ಹುಟ್ಟು ಹಬ್ಬದ ಯೋಜನೆ
9. ಮಕ್ಕಳ ಗ್ರಂಥಾಲಯ
10. ಮಕ್ಕಳ ಮನೋರಂಜನೆಗಾಗಿ ಆಟಿಕೆಗಳ ಸೌಲಭ್ಯ.
11. ಬಾಲ ವೇದಿಕೆ ಕಾರ್ಯಕ್ರಮ
12. ವಿಜಯರಂಗ ರಂಗಮಂದಿರ
13. ಚಟುವಟಿಕೆ ಕುಟೀರಗಳು, ಟ್ಯುರೆಟ್ ವಾಲ್, ಅಂಗಳ

**1. ಮಕ್ಕಳ ಬೇಸಿಗೆ ಶಿಬಿರ:-** ಬಾಲ ಭವನವು 5-16 ವಯಸ್ಸಿನ ಮಕ್ಕಳಲ್ಲಿ ಹುದುಗಿರುವ ಸೃಜನಾತ್ಮಕ ಪ್ರತಿಭೆಯನ್ನು ಹೊರಹೊಮ್ಮಿಸಲು ಅನುವಾಗುವಂತೆ ಪ್ರತ್ಯೇಕವಾದ ಕಲಾ ಕುಟೀರಗಳಲ್ಲಿ ಬೇಸಿಗೆ ರಜೆಯ ಅಂಗವಾಗಿ ಪ್ರತಿ ವರ್ಷದ ಏಪ್ರಿಲ್-ಮೇ ಮಾಹೆಯಲ್ಲಿ ಕೇಂದ್ರ ಬಾಲ ಭವನವು ಸೇರಿದಂತೆ ಬೆಂಗಳೂರು ನಗರದ ವಿವಿಧ ಬಡಾವಣೆಗಳ ಕೇಂದ್ರಗಳಲ್ಲಿ ಬೇಸಿಗೆ ಶಿಬಿರವನ್ನು ನಡೆಸಲಾಗುವುದು. ಚಿತ್ರಕಲೆ, ಕರಕುಶಲ ಕಲೆ, ಸಂಗೀತ, ನೃತ್ಯ, ಜೇಡಿಮಣ್ಣಿನ ಕಲೆ, ಮಾದರಿ ವಿಮಾನ/ಹಡಗು ತಯಾರಿಕೆ, ಬಾಟಿಕ್, ಟೈ ಅಂಡ್ ಡೈ, ಬೆಂಡಿನ ಕೆತ್ತನೆ ಕಲೆ, ಮೆಹಂದಿ, ರಂಗತರಬೇತಿ, ಗಿಟಾರ್, ಯಕ್ಷಗಾನ ಮುಂತಾದ ವೈವಿಧ್ಯಮಯ 19ಕ್ಕೂ ಹೆಚ್ಚಿನ ಚಟುವಟಿಕೆಗಳಲ್ಲಿ ಮಕ್ಕಳಗೆ ತರಬೇತಿ ನೀಡಲಾಗುವುದು. ಈ ಚಟುವಟಿಕೆಗಳಗೆ ಬಾಲ ಭವನದಿಂದ ಉಚಿತವಾಗಿ ಕಚ್ಚಾ ಸಾಮಗ್ರಿ/ಪರಿಕರಗಳನ್ನು ನೀಡಲಾಗುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಕೊಳಚೆ ಪ್ರದೇಶದ ನಿವಾಸಿಗಳು ಹಾಗೂ ಇಲಾಖೆಯ ಬಾಲ ಮಂದಿರಗಳ ಮಕ್ಕಳು ಉಚಿತವಾಗಿ ಪ್ರಯೋಜನವನ್ನು ನೀಡಲಾಗುವುದು. ಉಳದ ಮಕ್ಕಳಗೆ ರಿಯಾಯಿತಿ ದರದಲ್ಲಿ ರೂ. 500-00 ರಿಂದ 1,000-00ರವರೆಗೆ ಮೂರು ಹಂತದಲ್ಲಿ ಶುಲ್ಕ ವಿಧಿಸಲಾಗುವುದು. ಈ ಚಟುವಟಿಕೆಗಳನ್ನು ಮಕ್ಕಳ ವಯಸ್ಸಿಗೆ ಅನುಗುಣವಾಗಿ ಮುಂಜಾನೆಯಿಂದ ಸಂಜೆವರೆವಿಗೂ ಪ್ಯಾಕೇಜ್ ರೂಪದಲ್ಲಿ ನಡೆಸಲಾಗುವುದು. ಈ ಶಿಬಿರಕ್ಕೆ ಬರುವ ಮಕ್ಕಳಗೆ ರಿಯಾಯಿತಿ ದರದಲ್ಲಿ ಬಸ್ ಸೌಲಭ್ಯವನ್ನು ಒದಗಿಸಲಾಗುವುದು.

**2. ವಾರ್ಷಿಕ ಶಿಬಿರ**:- ಬೇಸಿಗೆ ಶಿಬಿರದ ನಂತರ ಚಟುವಟಿಕೆಗಳನ್ನು ಮುಂದುವರೆಸಲು ಬಾಲ ಭವನವು 5 ರಿಂದ 16 ವರ್ಷದೊಳಗಿನ ಮಕ್ಕಳಗೆ ಪ್ರತಿ ಪ್ರಸ್ತುತ ವರ್ಷದ ಆಗಸ್ಟ್ ಮಾಹೆಯಿಂದ ವರ್ಷದ ಜನವರಿ 26ರವರೆಗೆ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳನ್ನು ಪ್ರತಿ ಶನಿವಾರ ಮತ್ತು ಭಾನುವಾರಗಳಂದು, ಕೇಂದ್ರ ಬಾಲ ಭವನ, ಮಿನಿ ಬಾಲ ಭವನ ಹಾಗೂ ಸುಧಾರಣಾ ಸಂಸ್ಥೆಯ ಮಕ್ಕಳಗೆ ಏರ್ಪಡಿಸಲಾಗುತ್ತದೆ. ಈ ಶಿಬಿರಕ್ಕೆ ಬೇಸಿಗೆ ಶಿಬಿರದಲ್ಲಿ ಒದಗಿಸುವ ಚಟುವಟಿಕೆಗಳನ್ನು ಮುಂದುವರೆಸಲಾಗುವುದು. ಪ್ರತಿ ಚಟುವಟಿಕೆಗೆ ರೂ.250-00 ಶುಲ್ಕವನ್ನು ವಿಧಿಸಲಾಗುವುದು.

**3. ಬಾಲಶ್ರೀ ಪ್ರಶಸ್ತಿಗಾಗಿ ಸ್ಥಳೀಯ ಮಟ್ಟದ ಆಯ್ಕೆ ಶಿಬಿರ:-** ಬೆಂಗಳೂರಿನ ಬಾಲ ಭವನವು ರಾಷ್ಟ್ರೀಯ ಬಾಲ ಭವನ, ನವದೆಹಲಿ ಇವರು ನಡೆಸುವ ಮಕ್ಕಳ ಕಾರ್ಯಕ್ರಮಗಳಗೆ ಸಂಯೋಜನೆಗೊಂಡಿದ್ದು, ರಾಷ್ಟ್ರೀಯ ಬಾಲ ಭವನದ ವತಿಯಿಂದ ನಡೆಸುವ ಬಾಲಶ್ರೀ ಪ್ರಶಸ್ತಿಗಾಗಿ ಸ್ಥಳೀಯ ಮಟ್ಟದ ಆಯ್ಕೆಯನ್ನು ರಾಜ್ಯದ ಎಲ್ಲಾ ಮಕ್ಕಳಗೆ ಅವಕಾಶ ನೀಡುವುದರೊಂದಿಗೆ ಸ್ಥಳೀಯ ಮಟ್ಟದ

. . . . 3

ಆಯ್ಕೆಯನ್ನು ನಡೆಸಲಾಗುವುದು. ಸೃಜನಾತ್ಮಕ ಕಲೆ, ಸೃಜನಾತ್ಮಕ ಬರವಣಿಗೆ, ಸೃಜನಾತ್ಮಕ ಪ್ರದರ್ಶನ ಕಲೆ, ಕ್ರಿಯಾತ್ಮಕ ವಿಜ್ಞಾನದಲ್ಲಿ ನೂತನ ಅವಿಷ್ಕಾರ ಈ ನಾಲ್ಕೂ ಕ್ಷೇತ್ರಗಳಲ್ಲಿ ಸ್ಪರ್ಧೆಗಳನ್ನು ರಾಷ್ಟ್ರೀಯ ಬಾಲ ಭವನದ ಮಾರ್ಗಸೂಚಿಯಂತೆ ಏರ್ಪಡಿಸಿ, ಆಯ್ಕೆಯಾದ ಮಕ್ಕಳನ್ನು ಪ್ರಾಂತೀಯ ಮಟ್ಟದ ಆಯ್ಕೆಗೆ ನಿಯೋಜಿಸಲಾಗುವುದು. ಈ ಶಿಬಿರಕ್ಕೆ ತಗಲುವ ವೆಚ್ಚವನ್ನು ಕೇಂದ್ರ ಬಾಲ ಭವನದಿಂದ ಭರಿಸಲಾಗುವುದು. ರಾಷ್ಟ್ರ ಮಟ್ಟದಲ್ಲಿ ಆಯ್ಕೆಯಾದ ಮಕ್ಕಳಿಗೆ ಭಾರತದ ಘನತೆವೆತ್ತ ರಾಷ್ಟ್ರಪತಿಗಳಿಂದ ಬಾಲಶ್ರೀ ಪ್ರಶಸ್ತಿಯನ್ನು ನೀಡಿ ಸತ್ಕರಿಸಲಾಗುತ್ತದೆ.

**4. ಕಲಾಶ್ರೀ ಪ್ರಶಸ್ತಿ ಆಯ್ಕೆ ಶಿಬಿರ:–** ರಾಷ್ಟ್ರೀಯ ಬಾಲ ಭವನವು ಸೃಜನಾತ್ಮಕ ಕಲೆ, ಸೃಜನಾತ್ಮಕ ಬರವಣಿಗೆ, ಸೃಜನಾತ್ಮಕ ಪ್ರದರ್ಶನ ಕಲೆ ಹಾಗೂ ವಿಜ್ಞಾನದಲ್ಲಿ ನೂತನ ಅವಿಷ್ಕಾರ ಎಂಬ ಕಲಾ ಪ್ರಕಾರಗಳಲ್ಲಿ ನಡೆಸುವ ಬಾಲಶ್ರೀ ಪ್ರಶಸ್ತಿ ಶಿಬಿರದ ಮಾದರಿಯಲ್ಲಿಯೇ ಬೆಂಗಳೂರಿನ ಬಾಲ ಭವನದಲ್ಲಿ ಒಂದು ವಾರದ ವಸತಿ ಸಹಿತ ಶಿಬಿರವನ್ನು ಪ್ರತಿ ವರ್ಷದ ನವಂಬರ್ ಮೊದಲನೇ ವಾರದಿಂದ ನವಂಬರ್ 14ರವರೆಗೆ ನಡೆಸಲಾಗುವುದು. ರಾಜ್ಯದ ಜಿಲ್ಲೆಗಳಲ್ಲಿ ಸ್ಥಳೀಯ ಆಯ್ಕೆ ಶಿಬಿರದಲ್ಲಿ ಆಯ್ಕೆಯಾದ 8–16 ವರ್ಷದೊಳಗಿನ ಮಕ್ಕಳನ್ನು ಬೆಂಗಳೂರಿನ ಶಿಬಿರಕ್ಕೆ ಅಂತಿಮ ಆಯ್ಕೆಗಾಗಿ ಆಹ್ವಾನಿಸಲಾಗುವುದು. ಈ ಶಿಬಿರದ ಮೂಲ ಉದ್ದೇಶ, ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರ ಹೊಮ್ಮಿಸುವುದು, ವಿಶೇಷ ಚಟುವಟಿಕೆಗಳೊಂದಿಗೆ ನಡೆಸುವುದಲ್ಲದೆ, ಪರಿಸರದ ಬಗ್ಗೆ ಅರಿವು ಮೂಡಿಸುವುದು ಹಾಗೂ ಮಕ್ಕಳಲ್ಲಿ ಕಲಾಭಿರುಚಿ ಬೆಳೆಸಿ, ಪೋಷಿಸುವುದು ಈ ಶಿಬಿರದ ಮೂಲ ಉದ್ದೇಶವಾಗಿದೆ. ಈ ಶಿಬಿರವನ್ನು ಪ್ರತಿ ವರ್ಷ ದಿನಾಂಕ: 08.11ರಿಂದ 14.11 ರವರೆಗೆ ನಡೆಸಲಾಗುವುದು. ಈ ಶಿಬಿರದಲ್ಲಿ ಆಯ್ಕೆಯಾದ 10 ಮಕ್ಕಳನ್ನು ಮಕ್ಕಳ ದಿನಾಚರಣೆ ಅಂಗವಾಗಿ ನಡೆಸಲಾಗುವ ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದ " ಕಲಾಶ್ರೀ " ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಗುವುದು.

**5. ರಾಷ್ಟ್ರೀಯ ಹಬ್ಬಗಳ ಆಚರಣೆ:–** ಬಾಲ ಭವನವು ರಾಷ್ಟ್ರೀಯ ಹಬ್ಬಗಳಾದ ಭಾರತದ ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ, ಹಾಗೂ ದಸರ ಹಬ್ಬ, ಮುಂತಾದವುಗಳನ್ನು ಸಾಂಕೇತಿಕವಾಗಿ ಮಕ್ಕಳ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಮಕ್ಕಳಲ್ಲಿ ರಾಷ್ಟ್ರೀಯತೆ, ಭಾವೈಕ್ಯತೆ, ರಾಷ್ಟ್ರಪ್ರೇಮವನ್ನು ಬಿಂಬಿಸುವ ನಿಟ್ಟಿನಲ್ಲಿ ಆಚರಿಸಲಾಗುವುದು.

**6. ಮಕ್ಕಳ ಸದಸ್ಯತ್ವ:–** ಚಾಚಾ ನೆಹರೂರವರ ಹೆಸರಿನಲ್ಲಿ ಸ್ಥಾಪಿಸಲಾಗಿರುವ ಜವಾಹರ ಬಾಲ ಭವನವು ಮಕ್ಕಳ ಮನೋವಿಕಸನಕ್ಕೆ ಸೃಜನಾತ್ಮಕ ಕಲಾ ಬೆಳವಣಿಗೆಗೆ ಅನುವಾಗುವಂತೆ ಮಕ್ಕಳ ಸದಸ್ಯತ್ವ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯಲ್ಲಿ ಸದಸ್ಯತ್ವ ಪಡೆದ ಮಕ್ಕಳಿಗೆ ಅವಕಾಶವಿರುವ ಸೌಲಭ್ಯಗಳನ್ನು ಉಚಿತವಾಗಿ ವಿಸ್ತರಿಸಲಾಗುವುದು. ಇದರಲ್ಲಿ 5 ರಿಂದ 16 ವರ್ಷದ ಮಕ್ಕಳು ಬಾಲ ಭವನದ "ಮಕ್ಕಳ ಸದಸ್ಯತ್ವ" ವನ್ನು ಪಡೆದಲ್ಲಿ ಗ್ರಂಥಾಲಯ, ಒಳಾಂಗಣ ಆಟಗಳು, ಪುಟಾಣಿ ರೈಲು ಸವಾರಿ, ಚಿತ್ರಪ್ರದರ್ಶನ, ಹೊರಸಂಚಾರ, ಯೋಗ ತರಬೇತಿ ಮುಂತಾದವು ಗಳೊಂದಿಗೆ ಬೇಸಿಗೆ ಹಾಗೂ ವಾರ್ಷಿಕ ಶಿಬಿರಗಳಲ್ಲಿ ರಿಯಾಯಿತಿ ಹಾಗೂ ಹುಟ್ಟು ಹಬ್ಬ ಆಚರಿಸಲು ರಿಯಾಯಿತಿ ನೀಡುವುದು ಇತ್ಯಾದಿ ಸೌಲಭ್ಯಗಳನ್ನು ಸದರಿ ಸದಸ್ಯತ್ವದಡಿ ವಿಸ್ತರಿಸಲಾಗಿದೆ. ಸದಸ್ಯತ್ವ ಪಡೆದ ಮಕ್ಕಳಲ್ಲಿ ಅವರಲ್ಲಿರುವ ಪ್ರತಿಭೆಗೆ ಅನುಗುಣವಾಗಿ ರಾಜ್ಯ, ಅಂತರ ರಾಜ್ಯ, ರಾಷ್ಟ್ರೀಯ ಮಟ್ಟದ ಶಿಬಿರ/ಸೆಮಿನಾರ್‌ಗಳಿಗೆ ನಿಯೋಜಿಸಲಾಗುವುದು. ಸದಸ್ಯತ್ವದ ಶುಲ್ಕವು 05–06ವರ್ಷದವರೆಗೆ ರೂ. 1,000–00, 07–11 ವರ್ಷದವರೆಗೆ ರೂ. 750–00 ಹಾಗೂ 12–15ವರ್ಷದವರೆಗೆ ರೂ.500–00 ಒಂದು ಬಾರಿ ಶುಲ್ಕ ವಿಧಿಸುವುದರೊಂದಿಗೆ ಮಗುವಿಗೆ 16 ವರ್ಷದವರೆಗೆ ಸದಸ್ಯತ್ವವನ್ನು ನೀಡಲಾಗುವುದು.

**7. ಮಕ್ಕಳಿಗಾಗಿ ಸಮಗ್ರ ಕಾರ್ಯಕ್ರಮ ಯೋಜನೆ:–** 1983 ರಿಂದ ಪ್ರಾರಂಭವಾದ ಈ ಕಾರ್ಯಕ್ರಮವನ್ನು ಶಾಲಾ ಮಕ್ಕಳಿಗಾಗಿಯೇ ನಡೆಸಲಾಗುತ್ತಿದೆ. ಶಾಲಾ ಮಕ್ಕಳನ್ನು ಬಾಲ ಭವನದ ಬಸ್‌ನಲ್ಲಿ ಕರೆತಂದು ಪುಟಾಣಿ ರೈಲು ಸವಾರಿಯೊಂದಿಗೆ ಬಾಲ ಭವನದ ಆವರಣದೊಳಗಿರುವ ಇತರೆ ಆಟಿಕೆಗಳ ಸವಲತ್ತುಗಳೊಂದಿಗೆ ಮನರಂಜನಾ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ನಂತರ ಮಕ್ಕಳನ್ನು ಶಾಲೆಗೆ ಹಿಂತಿರುಗಿ ಬಿಡುವ ವ್ಯವಸ್ಥೆಯನ್ನು ಮಾಡಲಾಗಿದೆ.

**ಸಮಗ್ರ ಕಾರ್ಯಕ್ರಮಕ್ಕೆ ನಿಗದಿಪಡಿಸಿರುವ ಶುಲ್ಕ:**

| ಕ್ರಸಂ | ವಿವರ | ಪ್ರಸ್ತುತ ಶುಲ್ಕ | ಪರಿಷ್ಕೃತ ಶುಲ್ಕ |
|---|---|---|---|
| 01 | ವಾಹನ ಸೌಲಭ್ಯ ಹಾಗೂ ಒಂದು ಸುತ್ತು ಪುಟಾಣಿ ರೈಲು ಕಾಂಪ್ಲಿಮೆಂಟರಿ [ಕಡ್ಡಾಯವಲ್ಲ]<br>01 ರಿಂದ 20 ಕಿ.ಮೀ – ಹೋಗಿ ಬರಲು | ಒಬ್ಬರಿಗೆ ರೂ. 35–00 | ಒಬ್ಬರಿಗೆ ರೂ. 45–00 |
| 02 | 20 ರಿಂದ 30 ಕಿ.ಮೀ – ಹೋಗಿ ಬರಲು | ಒಬ್ಬರಿಗೆ ರೂ. 40/- | ಒಬ್ಬರಿಗೆ ರೂ. 50–00 |
| 03 | 30 ರಿಂದ 50 ಕಿ.ಮೀ – ಹೋಗಿ ಬರಲು | ಒಬ್ಬರಿಗೆ ರೂ. 50–00 | ಒಬ್ಬರಿಗೆ ರೂ. 60–00 |

ಸಮಗ್ರ ಕಾರ್ಯಕ್ರಮಕ್ಕೆ ಬಾಲ ಭವನದಿಂದ : ಬೆಳಗ್ಗೆ 9.00 ಘಂಟೆಯಿಂದ ಮ:2.00ಘಂಟೆಯವರೆಗೆ
ವಾಹನ ನೀಡುವ ವೇಳೆ : ಬೆಳಗ್ಗೆ 10.00 ಘಂಟೆಯಿಂದ ಮ:3.00ಘಂಟೆಯವರೆಗೆ
ಕನಿಷ್ಠ -- 50 ಮಕ್ಕಳು ಪ್ರತಿ ಟ್ರಿಪ್‌ಗೆ
ಗರಿಷ್ಠ -- 75 ಮಕ್ಕಳು ಪ್ರತಿ ಟ್ರಿಪ್‌ಗೆ
20 ಮಕ್ಕಳಿಗೆ ಒಬ್ಬರಂತೆ ಎಸ್ಕಾರ್ಟ್‌ಗೆ ಉಚಿತ ಪ್ರವೇಶವಿರುತ್ತದೆ.

**8. ಮಕ್ಕಳ ಹುಟ್ಟು ಹಬ್ಬದ ಆಚರಣೆ:–** ಬಾಲ ಭವನದ ಆವರಣದೊಳಗೆ 12 ವರ್ಷದೊಳಗಿನ ಮಕ್ಕಳು ಪ್ರತ್ಯೇಕವಾಗಿ ನಿರ್ಮಿಸಿರುವ 100 ಫಿ 120 ಅಳತೆಯ ಪ್ರದೇಶದಲ್ಲಿ ಹುಟ್ಟು ಹಬ್ಬ ಆಚರಿಸುವ ಸೌಲಭ್ಯವನ್ನು ವಿಸ್ತರಿಸಲಾಗಿರುತ್ತದೆ. ಹುಟ್ಟುಹಬ್ಬ ಆಚರಿಸುವ ಸಂದರ್ಭದಲ್ಲಿ ಉಚಿತವಾಗಿ ಒಂದು ರೌಂಡ್ ಪುಟಾಣಿ ರೈಲಿನ ಸೌಲಭ್ಯವನ್ನು ವಿಸ್ತರಿಸಲಾಗಿರುತ್ತದೆ.

**ಹುಟ್ಟುಹಬ್ಬ ಆಚರಣೆಗೆ ನಿಗದಿಸಿರುವ ದರ**

| ಕ್ರಸಂ | ವಿವರ | ಪ್ರಸ್ತುತ ಶುಲ್ಕ | ಪರಿಷ್ಕೃತ ಶುಲ್ಕ |
|---|---|---|---|
| 1 | ಹುಟ್ಟುಹಬ್ಬ ಆಚರಣೆ :<br>ಒಂದನೇ ಅವಧಿ: ಬೆ. 10.00 ರಿಂದ 01.00 ರವರೆಗೆ<br>ಎರಡನೇ ಅವಧಿ: ಮ. 03.30 ರಿಂದ 06.30 ರವರೆಗೆ | ರೂ. 5,000–00<br>ಜನರೇಟರ್‌ಗಾಗಿ ರೂ. 300/– | ರೂ. 6,000/–<br>ಜನರೇಟರ್‌ಗಾಗಿ ರೂ. 500/– |

. . . . . 5ನೇ ಪುಟಕ್ಕೆ

ಆಹ್ವಾನಿತರನ್ನು 75 ಜನಕ್ಕೆ ಸೀಮಿತಗೊಳಿಸುವುದು ಮತ್ತು ಸಸ್ಯಹಾರ ಮಾತ್ರ ಸದರಿ ಕಾರ್ಯಕ್ರಮಕ್ಕೆ 60 ಆಸನಗಳು ಹಾಗೂ 2 ಟೇಬಲ್‌ಗಳನ್ನು ನೀಡಲಾಗುತ್ತಿದ್ದು, ಹೆಚ್ಚುವರಿ 30 ಆಸನಗಳಿಗೆ ರೂ. 100-00 ಶುಲ್ಕಹಾಗೂ ಪ್ರಕೃತಿ ವಿಪತ್ತು ಅಥವಾ ಬಾಲ ಭವನದ ವತಿಯಿಂದ ಕಾರ್ಯಕ್ರಮ ರದ್ದಾಗುವುದನ್ನು ಹೊರತು ಪಡಿಸಿ ಕಾರ್ಯಕ್ರಮ ಸಂಘಟಕರ ವತಿಯಿಂದ ಕಾರ್ಯಕ್ರಮವನ್ನು ರದ್ದುಪಡಿಸಿದಲ್ಲಿ ಶೇ.50ರಷ್ಟು ಹಣವನ್ನು ಕಡಿತಗೊಳಸಲಾಗುವುದು. ಕಾರ್ಯಕ್ರಮವನ್ನು ಮುಂದೂಡಿಕೆ ಅಥವಾ ನಿಗದಿತ ದಿನಾಂಕಕ್ಕೆ ಮೊದಲೇ ಹಮ್ಮಿಕೊಂಡಲ್ಲಿ (ಪ್ರೀಪೋನ್) ಶೇ 10 ಹೆಚ್ಚುವರಿ ಶುಲ್ಕ ಪಾವತಿಸಬೇಕಾಗುತ್ತದೆ.

## 9. ಮಕ್ಕಳ ಗ್ರಂಥಾಲಯ:-

ಬಾಲ ಭವನದ ಆವರಣದಲ್ಲಿರುವ ರಂಗಮಂದಿರದ ಎಡ ಪಾರ್ಶ್ವಕ್ಕೆ ಹೊಂದಿಕೊಂಡಿರುವ ಕೊಠಡಿಯಲ್ಲಿ ಮಕ್ಕಳಿಗಾಗಿ ಗ್ರಂಥ ಭಂಡಾರವನ್ನು ತೆರೆಯಲಾಗಿದ್ದು, ಮಕ್ಕಳ ಪ್ರತಿಭೆ ಹಾಗೂ ಬುದ್ಧಿ ವಿಕಸನಕ್ಕಾಗಿ ಭದ್ರ ಬುನಾದಿ ಹಾಕಲು ಅನುವಾಗುವಂತೆ 2630 ಕನ್ನಡ, 1984 ಇಂಗ್ಲೀಷ್ ಹಾಗೂ 300 ಹಿಂದಿ ಭಾಷೆಯ ಮಕ್ಕಳ ಪುಸ್ತಕಗಳನ್ನು ಸಂಗ್ರಹಿಸಿ ಉಪಯೋಗಿಸಲಾಗುತ್ತಿದೆ.

## 10. ಮಕ್ಕಳ ಮನೋರಂಜನೆಗಾಗಿ ಆಟಿಕೆಗಳ ಸೌಲಭ್ಯ:-

ಮಕ್ಕಳಿಗೆ ಮನರಂಜನಾತ್ಮಕ ಸೌಲಭ್ಯವನ್ನು ನೀಡಲು ಬಾಲ ಭವನದ ಆವರಣದಲ್ಲಿ ಪುಟಾಣಿ ರೈಲು, ದೋಣಿ ವಿಹಾರ, ನಾಣ್ಯ ಚಾಲಿತ ಯಂತ್ರ ಆಟಿಕೆಗಳನ್ನು ಅಳವಡಿಸಲಾಗಿದೆ. ಇದಲ್ಲದೆ ಜಾರುಬಂಡೆ, ಉಯ್ಯಾಲೆ, ಸೀಸಾ ಮುಂತಾದ ಆಟಿಕೆಗಳನ್ನು ಸಹ ಹಾಕಲಾಗಿದ್ದು, ರಂಗಮಂದಿರದ ಮುಂಭಾಗದಲ್ಲಿರುವ ಕಾರಂಜಿ ಆವರಣದಲ್ಲಿ ವಿವಿಧ ಪ್ರಾಣಿಗಳ ಆಕೃತಿಗಳನ್ನು ನಿಲ್ಲಿಸಲಾಗಿದೆ. ಹಾಗೂ ಮಕ್ಕಳ ಕಾರ್ಯಕ್ರಮಗಳಿಗಾಗಿ ಸುಂದರ ಕುಟೀರಗಳನ್ನು ನಿರ್ಮಿಸಲಾಗಿದ್ದು, ಇವುಗಳೊಂದಿಗೆ ಮಕ್ಕಳ ತಿಂಡಿ ತಿನಿಸಿಗಾಗಿ ಕ್ಯಾಂಟೀನ್ ಸೌಲಭ್ಯವನ್ನೂ ಸಹ ಒದಗಿಸಲಾಗಿದೆ.

## 11. ಬಾಲವೇದಿಕೆ ಕಾರ್ಯಕ್ರಮ :

ಬಾಲ ಭವನವು ಮಕ್ಕಳಲ್ಲಿರುವ ಪ್ರತಿಭೆಯನ್ನು ಅಭಿವ್ಯಕ್ತಗೊಳಿಸುವ ನಿಟ್ಟಿನಲ್ಲಿ ಮಕ್ಕಳಿಗಾಗಿ ರಂಗಮಂದಿರವನ್ನು ಉಚಿತವಾಗಿ ನೀಡುವುದರೊಂದಿಗೆ ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಪ್ರತಿ ಮಕ್ಕಳಿಗೆ ರೂ. 250-00 ಪ್ರೋತ್ಸಾಹಕರವಾಗಿ ಸಮೂಹ ಪ್ರದರ್ಶನ ನೀಡುವ ಪ್ರತಿ ಗುಂಪುಗಳಿಗೆ ರೂ.500-00ರಂತೆ ಪ್ರೋತ್ಸಾಹ ಧನ ನೀಡಿ, ಪ್ರತಿಯೊಬ್ಬರಿಗೂ ಪ್ರಮಾಣ ಪತ್ರ ನೀಡಲಾಗುವುದು. ಈ ಕಾರ್ಯಕ್ರಮವನ್ನು ಆಗಸ್ಟ್ ಮಾಹೆಯಿಂದ ಫೆಬ್ರವರಿಯವರೆಗೆ ಪ್ರತಿ ಭಾನುವಾರ ಮಧ್ಯಾಹ್ನ 2.30 ರಿಂದ 5.00 ಘಂಟೆವರೆಗೆ ನಡೆಸಲಾಗುತ್ತಿದೆ.

## 12. ಮಕ್ಕಳ ಲಿಟಲ್ ಥಿಯೇಟರ್ :

1. ಸುಮಾರು 425 ಆಸನಗಳ ವ್ಯವಸ್ಥೆ ಇರುತ್ತದೆ.
2. 35 ಎಂಎಂ ಎರಡು ಪ್ರೊಜೆಕ್ಟರ್‌ಗಳು ಹಾಗೂ 16 ಎಂಎಂ ಎರಡು ಪ್ರೊಜೆಕ್ಟರ್‌ಗಳ ವ್ಯವಸ್ಥೆ ಇರುತ್ತದೆ.
3. 35 ಎಂಎಂ ಮತ್ತು 16 ಎಂಎಂ ಚಲನಚಿತ್ರ ಪರದೆ ಇರುತ್ತದೆ.

. . . . . 6ನೇ ಪುಟಕ್ಕೆ

4. ಸಮರ್ಪಕವಾದ ಲೈಟ್ ಮತ್ತು ಸೌಂಡ್ ವ್ಯವಸ್ಥೆ ಇರುತ್ತದೆ.
5. ಸುಮಾರು 1500 ಚ.ಅ. ಅಳತೆಯ ರಂಗವೇದಿಕೆ ಇರುತ್ತದೆ.
6. ಶೌಚಾಲಯವೂ ಹೊಂದಿಕೊಂಡಂತೆ ಎರಡು ಗ್ರೀನ್ ರೂಂಗಳು ಇರುತ್ತವೆ.
7. ರಂಗಮಂದಿರದ ಮುಂಭಾಗ ವಿಶಾಲವಾದ ಪ್ರಾಂಗಣವೂ ಇರುತ್ತದೆ.
8. ಚಲನಚಿತ್ರ ಹಾಗೂ ರಂಗಚಟುವಟಿಕೆ ನಡೆಸಲು ಪೂರಕವಾದ ವಾತಾವರಣ ಒಳಗೊಂಡಿರುತ್ತದೆ.

1972ರಿಂದಲೂ ಸದರಿ ಆಟಲ್ ಥಿಯೇಟರ್‌ನಲ್ಲಿ ಮಕ್ಕಳಿಗೆ ಸೀಮಿತವಾದ ಚಲನಚಿತ್ರ ಪ್ರದರ್ಶನಗಳು, ಸಾಂಸ್ಕೃತಿಕ ಕಾರ್ಯಕ್ರಮಗಳಾದ ಸಂಗೀತ, ನೃತ್ಯ, ನಾಟಕ ಈ ಪ್ರಕಾರಗಳಲ್ಲಿ ಅನೇಕ ಸಹಸ್ರಾರು ಕಾರ್ಯಕ್ರಮಗಳನ್ನು ನೀಡುತ್ತಾ ಬರುತ್ತಲಿದೆ. ಬಾಲ ಭವನದ ಕಾರ್ಯಕ್ರಮಗಳೇ ಅಲ್ಲದೇ ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಸಂಘ ಸಂಸ್ಥೆಗಳಿಗೂ ಕೂಡ ನಾಮಿನಲ್ ದರದಲ್ಲಿ ಬಾಡಿಗೆಗಾಗಿ ಸದರಿ ಥಿಯೇಟರ್ ಸದುಪಯೋಗವಾಗುತ್ತಿದೆ.

## <u>ರಂಗಮಂದಿರಕ್ಕೆ ನಿಗದಿಪಡಿಸಿರುವ ಶುಲ್ಕ</u>

| ಕ್ರಸಂ | ವಿವರ | ಪ್ರಸ್ತುತ ಶುಲ್ಕ | ನಿಗದಿಸಿದ ಪರಿಷ್ಕೃತ ಶುಲ್ಕ |
|---|---|---|---|
| 1 | ಮಕ್ಕಳ ಸ್ಟೇಜ್ ಪ್ರೋಗ್ರಾಂ: ಶಾಲಾ ಮಕ್ಕಳ ಸ್ಕೂಲ್ ಡೇ, ಸಮಾರೋಪ ಹಾಗೂ ಸಾಂಸ್ಕೃತಿಕ ಕಾರ್ಯ ಕ್ರಮಗಳಿಗೆ ಮಾತ್ರ ( 8 ಘಂಟೆ ಅವಧಿಗೆ ಮಾತ್ರ ) | ರೂ. 5,000/- | ರೂ. 7,500/- |
| 2 | ಕನ್ನಡ ಕಾರ್ಯಕ್ರಮಗಳು: ( 8 ಘಂಟೆ ಅವಧಿಗೆ ) | ರೂ. 3,000/- | ರೂ. 4,000/- |
| 3 | ರಿಹರ್ಸಲ್ಸ್ : ( 4 ಘಂಟೆ ಅವಧಿಗೆ ) | ರೂ. 2,500/- | |
| 4 | ಸಂಘ/ಸರ್ಕಾರೇತರ ಸಂಸ್ಥೆಗಳು ನಡೆಸುವ ವಾಣಿಜ್ಯ ಕಾರ್ಯಕ್ರಮಗಳಿಗೆ [ಇಲಾಖೆ ವ್ಯಾಪ್ತಿಯಲ್ಲಿ ನೊಂದಾಯಿಸಿರುವ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳನ್ನು ಹೊರತುಪಡಿಸಿ ] | ರೂ. 5,000/- [8 ಘಂಟೆ ಅವಧಿಗೆ] | ರೂ. 6,000/- |
| 5 | ಚಿಲ್ಡ್ರನ್ಸ್ ಟಿ.ವಿ.ಶೂಟಿಂಗ್/ವಿಡಿಯೋ ಚಿತ್ರೀಕರಣಕ್ಕಾಗಿ [ರಂಗ ಮಂದಿರದಲ್ಲಿ] [ 8 ಘಂಟೆ ಅವಧಿಗೆ] | ರೂ. 9,000/- | ರೂ. 10,000/- |
| 6 | ಫಿಲ್ಮ್ ಶೋ : ( 3 ಘಂಟೆ/ಪ್ರತಿ ಶೋಗೆ ) | ರೂ. 5,000/- | ರೂ. 5,000/- |
| 7 | ಟಿವಿ ಶೂಟಿಂಗ್/ಫಿಲ್ಮ್ ಶೂಟಿಂಗ್ ರೂ.10,000-00 [ 8 ಘಂಟೆ ಅವಧಿಗೆ] | ರೂ.10,000/ | ರೂ. 15,000/- |

ಕಾರ್ಯಕ್ರಮವು ಪ್ರಕೃತಿ ವಿಪತ್ತು ಹಾಗೂ ಬಾಲ ಭವನದ ವತಿಯಿಂದ ರದ್ದಾಗುವುದನ್ನು ಹೊರತುಪಡಿಸಿ, ಕಾರ್ಯಕ್ರಮ ಸಂಘಟಕರ ವತಿಯಿಂದ ರದ್ದಾದಲ್ಲಿ ಪಾವತಿಸಿದ ಶುಲ್ಕದಲ್ಲಿ ಶೇ. 25 ರಷ್ಟು ಕಡಿತಗೊಳಿಸಲು ಹಾಗೂ ( ಬಾಲಭವನದ ಸೌಲಭ್ಯಾವಕಾಶದಂತೆ ಮಾತ್ರ) ಕಾರ್ಯಕ್ರಮದ ಮುಂದೂಡಿಕೆ ಅಥವಾ ನಿಗದಿತ ದಿನಾಂಕಕ್ಕಿಂತ ಮುಂಚಿತವಾಗಿ ವಿಸ್ತರಿಸಲು ಶೇ. 10 ರಷ್ಟು ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆ. ಟಿವಿ/ಫಿಲ್ಮ್ ಶೂಟಿಂಗ್‌ಗಳಿಗೆ ತೋಟಗಾರಿಕೆ ಇಲಾಖೆಯ ನಿಬಂಧನೆಗಳು ಹಾಗೂ ಶುಲ್ಕವನ್ನು ಪಾವತಿಸಿ, ಅನುಮತಿ ಪಡೆದು ನಡೆಸುವ ನಿಬಂಧನೆಗೆ ಒಳಪಟ್ಟಿದೆ.

. . . . 6ನೇ ಪುಟಕ್ಕೆ

**ಚಟುವಟಿಕೆ ಅಂಗಳ :**

| ಕ್ರಸಂ | ವಿವರ | ಪ್ರಸ್ತುತ ಶುಲ್ಕ | ಪರಿಷ್ಕೃತ ಶುಲ್ಕ |
|---|---|---|---|
| 1 | ಪ್ರತಿ ಒಂದು ಚಟುವಟಿಕೆ ಕುಟೀರಕ್ಕೆ [ ಪ್ರತಿ ಅವಧಿಗೆ ] ಬಯಲುರಂಗಮಂದಿರ[ಪ್ರತಿ ಅವಧಿಗೆ] [ಒಂದನೇ ಅವಧಿ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಎರಡನೇ ಅವಧಿ : ಮಧ್ಯಾಹ್ನ 2.30 ರಿಂದ ಸಂಜೆ 5.30ರವರೆಗೆ ] ಚಟುವಟಿಕೆ ಆವರಣಕ್ಕೆ | ಚಟುವಟಿಕೆ ಆವರಣಕ್ಕೆ ಬೆಳಗ್ಗೆ 10.00 ರಿಂದ 1.00 ರವರೆಗೆ ಪ್ರತಿ ಅವಧಿಗೆ ರೂ.5,000/- ಬೆಳಗ್ಗೆ 10.00 ರಿಂದ 6.00ರವರೆಗೆ ರೂ. 8,000-00 | ಚಟುವಟಿಕೆ ಆವರಣಕ್ಕೆ<br>ಬೆಳಗ್ಗೆ 10.00 ರಿಂದ 1.00 ರವರೆಗೆ ಪ್ರತಿ ಅವಧಿಗೆ ರೂ. 6,000-00 ಬೆಳಗ್ಗೆ 10.00 ರಿಂದ 6.00ರವರೆಗೆ ರೂ. 9,000-00 |

**ಬಾಲ ಭವನದ ಆವರಣ [ ಬುರುಜು ಗೋಡೆ ಮುಂಭಾಗ/ರಂಗಮಂದಿರದ ಮುಂಭಾಗ ] :**

| ಕ್ರಸಂ | ವಿವರ | ಪರಿಷ್ಕೃತ ಶುಲ್ಕ | ಪರಿಷ್ಕೃತ ಶುಲ್ಕ |
|---|---|---|---|
| 1 | ಪ್ರತಿ ಕಾರ್ಯಕ್ರಮಕ್ಕಾಗಿ ಬೆಳಗ್ಗೆ 10.00 ರಿಂದ 1.00 ರವರೆಗೆ | ಪ್ರತಿ ಕಾರ್ಯಕ್ರಮಕ್ಕೆ ಬೆಳಗ್ಗೆ 10.00 ರಿಂದ 1.00 ರವರೆಗೆ ರೂ. 1,500-00<br>ಬೆಳಗ್ಗೆ 10.00 ರಿಂದ ಸಂಜೆ 6.00ರವರೆಗೆ ರೂ. 3,000-00 | ರೂ. 3,000/-<br>ರೂ. 6,000/- |

ಕಾರ್ಯಕ್ರಮವು ಪ್ರಕೃತಿ ವಿಪತ್ತು ಹಾಗೂ ಬಾಲ ಭವನದ ವತಿಯಿಂದ ರದ್ದಾಗುವುದನ್ನು ಹೊರತುಪಡಿಸಿ, ಕಾರ್ಯಕ್ರಮ ಸಂಘಟಕರ ವತಿಯಿಂದ ರದ್ದಾದಲ್ಲಿ ಪಾವತಿಸಿದ ಶುಲ್ಕದಲ್ಲಿ ಶೇ. 25ರಷ್ಟು ಕಡಿತಗೊಳಿಸಲು ಹಾಗೂ ( ಬಾಲಭವನದ ಸೌಲಭ್ಯಾವಕಾಶದಂತೆ ಮಾತ್ರ) ಕಾರ್ಯಕ್ರಮದ ಮುಂದೂಡಿಕೆ ಅಥವಾ ನಿಗದಿತ ದಿನಾಂಕಕ್ಕಿಂತ ಮುಂಚಿತವಾಗಿ ವಿಸ್ತರಿಸಲು ಶೇ. 10 ರಷ್ಟು ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆ.

-ooooooo-